## ಅನುಬಂಧ - 3 ( ಕೆವೈಸಿ ದಾಖಲೆ ಗಳು )

## ಸದಸ್ಯರು (Members / Stock Brokers), ಅಧಿಕೃತ ವ್ಯಕ್ತಿಗಳು (Authorized Persons) ಮತ್ತು ಗ್ರಾಹಕರ ಹಕ್ಕುಗಳು ಮತ್ತು ಬಾಧ್ಯತೆಗಳು

### -ಸರಕು ಎಕ್ಸ್ ಚೇಂಜುಗಳು SEBI ಹಾಗೂ ಸರಕು ಎಕ್ಸ್ ಚೇಂಜ್‌ಗಳು ನಿರ್ಣಯಿಸಿದಂತೆ

1. ಗ್ರಾಹಕನ ಕಮೊಡಿಟಿಎಸ್ (commodities) / SEBI ಮತ್ತು ಅದರ ಅಡಿಯಲ್ಲಿ ಕಾಲಕಾಲಕ್ಕೆ ನೀಡುವ ಸುತ್ತೋಲೆಗಳು / ನೋಟಿಸುಗಳು ರೂಪಿಸಿರುವ ನಿಯಮಗಳು/ಬೈಲಾಗಳು ಮತ್ತು ವ್ಯಾಪಾರ ಸೂತ್ರಗಳು / ನಿಬಂಧನೆಗಳ ಪ್ರಕಾರ ವ್ಯವಹಾರಗಳಿಗೆ ಅಂಗೀಕರಿಸಲ್ಪಡುವ ()/ಸೆಕ್ಯುರಿಟಿಗಳು / ಕರಾರುಗಳು / ಇತರ ಉಪಕರಣಗಳಲ್ಲಿ ಮಾತ್ರ ಹೂಡಿಕೆ / ವ್ಯಾಪಾರ ಮಾಡಬೇಕು.
2. ಸದಸ್ಯರು, ಅಧಿಕೃತ ವ್ಯಕ್ತಿ ಮತ್ತುಗ್ರಾಹಕರು ಕಾಲ ಕಾಲಕ್ಕೆ ಜಾರಿಯಲ್ಲಿರುವ ಎಕ್ಸ್‌ಚೇಂಜ್ ನಿಯಮಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಅದರ ಸುತ್ತೋಲೆಗಳು/ನೋಟಿಸುಗಳ ಅಡಿಯಲ್ಲಿ ನೀಡಲಾದ ಎಲ್ಲ ನಿಯಮಗಳು, ಬೈಲಾಗಳು ಮತ್ತು ನಿಬಂಧನೆಗಳು SEBI ಮತ್ತು ನಿಬಂಧನೆಗಳು ಹಾಗು ಕಾಲಕಾಲಕ್ಕೆ ಜಾರಿಯಲ್ಲಿರುವ ಸರ್ಕಾರದ ಅಧಿಕಾರಿಗಳ ಸಂಬಂಧಪಟ್ಟ ಅಧಿಸೂಚನೆಗಳಿಂದ ಬದ್ಧರಾಗುತ್ತಾರೆ.
3. ಸದಸ್ಯರ ಮೂಲಕ ತಮ್ಮ ಆದೇಶಗಳನ್ನು ಜಾರಿಗೊಳಿಸಬಯಸುವ ಗ್ರಾಹಕರು ಸರಕುಗಳು ಮತ್ತು/ಅಥವಾ ಡಿರೈವೆಟೀವ್ಸ್ ಕರಾರುಗಳನ್ನು ನಿಭಾಯಿಸುವಲ್ಲಿ ಸದಸ್ಯರಿಗೆ ಇರುವ ಸಾಮರ್ಥ್ಯದ ಬಗ್ಗೆ ತಾವೇ ನಿರ್ಣಯ ಕೈಗೊಳ್ಳಬೇಕು. ಆದೇಶಗಳನ್ನು ಸದಸ್ಯರು ಮೂಲಕ ಜಾರಿಗೊಳಿಸುವ ಮುನ್ನ ಇದನ್ನು ಕಾಲಕಾಲಕ್ಕೆ ಗ್ರಾಹಕರು ಮಾಡಬೇಕಾಗುತ್ತದೆ.
4. ಸದಸ್ಯರು ತಾನು ಒದಗಿಸುವ ಸೇವೆಗಳಿಗೆ ಗ್ರಾಹಕನ ಹೂಡಿಕೆ ಉದ್ದೇಶಗಳ ಅನುಗುಣವಾಗಿ ಇವೆಯೇ ಎಂದು ಪರಿಶೀಲಿಸುತ್ತಿರಬೇಕು ಮತ್ತು ಗ್ರಾಹಕನ ಸಾಚಾತನ ಮತ್ತು ಹಣಕಾಸಿನ ಬದ್ಧತೆಗಳ ಬಗ್ಗೆ ನಿರಂತರವಾಗಿ ಗಮನ ಹರಿಸುತ್ತಿರಬೇಕು.
5. ಈ ವ್ಯವಹಾರದಲ್ಲಿ ಸದಸ್ಯರು ತನ್ನ ಹೊಣೆಗಾರಿಕೆ ಎಷ್ಟೆಂಬುದನ್ನು ಗ್ರಾಹಕನಿಗೆ ಮನದಟ್ಟು ಮಾಡಿಕೊಡಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು-ಮಿತಿಗಳು,ಹೊಣೆಗಾರಿಕೆ ಮತ್ತು ಯಾವ ಸಾಮರ್ಥ್ಯದಲ್ಲಿ ತಾನು ಕಾರ್ಯ ನಡೆಸುತ್ತಿದ್ದೇನೆ ಇತ್ಯಾದಿಗಳು ಇದರಲ್ಲಿ ಸೇರುತ್ತವೆ.
6. ವೃತ್ತಿಪರ ಕಾರ್ಯತತ್ಪರತೆಯ ಅವಶ್ಯಕತೆಗಳು
    a. ಸದಸ್ಯರು ಆರ್ಥಿಕ ಒಪ್ಪಂದವನ್ನು ಮಾಡಿಕೊಳ್ಳುವಾಗ ಅಥವಾ ಅದರ ಅಡಿಯಲ್ಲಿ ಯಾವುದೇ ಜವಾಬ್ದಾರಿಗಳನ್ನು ಪೂರೈಸುವಾಗ ವೃತ್ತಿಪರ ಕಾರ್ಯತತ್ಪರತೆಯನ್ನು ಪ್ರದರ್ಶಿಸಬೇಕು.
    b. "ವೃತ್ತಿಪರ ಕಾರ್ಯತತ್ಪರತೆ"ಯೆಂದರೆ ಒಬ್ಬ ಸದಸ್ಯರು ಒಬ್ಬ ಗ್ರಾಹಕರೆಡೆಗೆ ತೋರಿಸಬಹುದಾದ ಕೌಶಲ್ಯ ಹಾಗೂ ಕಾಳಜಿಗಳೆಂದಾಗಿದ್ದು, ಅದು ಹೀಗಿರುತ್ತದೆ -
        i. ಪ್ರಾಮಾಣಿಕ ಮಾರುಕಟ್ಟೆಯ ಪದ್ಧತಿಗಳು;
        ii. ಉತ್ತಮ ವಿಶ್ವಾಸದ ತತ್ವ;
        iii. ಗ್ರಾಹಕರ ಜ್ಞಾನ, ಅನುಭವ ಮತ್ತು ನೈಪುಣ್ಯದ ಮಟ್ಟ;
        iv. ಗ್ರಾಹಕರು ಪಡೆಯುತ್ತಿರುವ ಆರ್ಥಿಕ ಉತ್ಪನ್ನ *ಅಥವಾ ಹಣಕಾಸು ಸೇವೆಯ ಸ್ವರೂಪ ಹಾಗೂ ಅಪಾಯದ ಪ್ರಮಾಣ; ಮತ್ತು
        v. ಗ್ರಾಹಕರು ಸದಸ್ಯರನ್ನು ಅವಲಂಬಿಸಿರುವ ಮಟ್ಟ.

*ಸರಕು ಜನ್ಯ ಒಪ್ಪಂದ

7. ಅಧಿಕೃತ ವ್ಯಕ್ತಿಯು ಗ್ರಾಹಕನ(ರ) ಜೊತೆ ನಡೆಸುವ ಎಲ್ಲ ವ್ಯವಹಾರಗಳಲ್ಲೂ ಸಬ್ -ಬ್ರೋಕರ್ ಬ್ರೋಕರಿಗೆ ಅಗತ್ಯವಾದ ನೆರವು ಮತ್ತು ಸಹಕಾರವನ್ನು ಒದಗಿಸಬೇಕು.

**ಗ್ರಾಹಕನ ಮಾಹಿತಿ**

8. ಗ್ರಾಹಕನು 'ಅಕೌಂಟ್ ಓಪನಿಂಗ್ ಫಾರಂ'ನಲ್ಲಿ ಸದಸ್ಯರಿಗೆ ಬೇಕಾದಂತಹ, ಸರಕು ಎಕ್ಸ್ ಚೇಂಜುಗಳು/ SEBI ಕಾಲ ಕಾಲಕ್ಕೆ ಕಡ್ಡಾಯ ಮಾಡುವ ಎಲ್ಲ ವಿವರಗಳನ್ನು ಪೂರ್ಣವಾಗಿ ಮತ್ತು ರುಜುವಾತು ಒದಗಿಸುವ ವಿವರಗಳನ್ನು ಒದಗಿಸಬೇಕು.
9. ಗ್ರಾಹಕನು ಖಾತೆ ತೆರೆಯುವ ಕಾಗದ ಪತ್ರಗಳಲ್ಲಿರುವ ಎಲ್ಲ ಕಡ್ಡಾಯ ನಿಬಂಧನೆಗಳ ಬಗ್ಗೆ ಪರಿಚಯ ಹೊಂದಿರಬೇಕು. ಗ್ರಾಹಕನು ನಿರ್ದಿಷ್ಟವಾಗಿ ಸ್ವೀಕರಿಸುವುದಕ್ಕೆ ಒಳಪಟ್ಟು ಸದಸ್ಯರು ನಿಗದಿ ಪಡಿಸುವ ಯಾವುದೇ ಹೆಚ್ಚುವರಿ ಕಲಂಗಳು ಅಥವಾ ಕಾಗದ ಪತ್ರಗಳು ಕಡ್ಡಾಯವಲ್ಲ.
10. ಖಾತೆ ತೆರೆಯುವಾಗ ಅಥವಾ ನಂತರ 'ಅಕೌಂಟ್ ಓಪನಿಂಗ್ ಫಾರಂ'ನಲ್ಲಿ ಒದಗಿಸಿರುವ ಮಾಹಿತಿಯಲ್ಲಿ ಏನಾದರೂ ಬದಲಾವಣೆಗಳಾದರೆ ಗ್ರಾಹಕನು ತಕ್ಷಣವೇ ಸದಸ್ಯರಿಗೆ ತಿಳಿಸಬೇಕು. ಇದರಲ್ಲಿ ಪಿಟಿಷನ್/ದಿವಾಳಿತನದ ಪಿಟಿಷನ್ ಅಥವಾ ಗ್ರಾಹಕನ ಸಾಮರ್ಥ್ಯದ ಮೇಲೆ ಪ್ರಮುಖ ಪ್ರಭಾವ ಬೀರುವ ಯಾವುದೇ ತಗಾದೆಯ ಬಗೆಗಿನ ಮಾಹಿತಿಯೂ ಸೇರುತ್ತದೆ. ಗ್ರಾಹಕನು ನಿಗದಿತ ಕಾಲಾವಧಿಯ ಆಧಾರದ ಮೇಲೆ ಸದಸ್ಯರಿಗೆ ತನ್ನ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ತಾಜಾ ಮಾಹಿತಿಯನ್ನು ನೀಡುತ್ತಿರಬೇಕು.

11.A. ಹಣಕಾಸಿನ ಒಪ್ಪಂದಗಳಲ್ಲಿ ಅನ್ಯಾಯದ ನಿಯಮಗಳಿಂದ ರಕ್ಷಣೆ**

a. ಒಂದು ಚರ್ಚಿಸಿರದ ಒಪ್ಪಂದದ ನ್ಯಾಯವಲ್ಲದ ನಿಯಮ ಅಮಾನ್ಯವಾಗಿರುತ್ತದೆ.

b. ಒಂದು ನಿಯಮವು ಹೀಗಿದ್ದಲ್ಲಿ ನ್ಯಾಯಯುತವಾಗಿರುವುದಿಲ್ಲ-

   i. ಗ್ರಾಹಕರಿಗೆ ಹಾನಿಯಾಗುವಂತೆ ಆರ್ಥಿಕ ಒಪ್ಪಂದದಲ್ಲಿರುವ ಪಕ್ಷಗಳ ಹಕ್ಕುಗಳು ಮತ್ತು ಕರ್ತವ್ಯಗಳಲ್ಲಿ ಗಮನಾರ್ಹ ಅಸಮತೋಲನಕ್ಕೆ ಕಾರಣವಾಗುತ್ತದೆ; ಮತ್ತು

   ii. ಸದಸ್ಯರ ಕಾನೂನುಬದ್ಧ ಹಿತಾಸಕ್ತಿಗಳನ್ನು ರಕ್ಷಿಸಲು ಸಕಾರಣವಾಗಿ ಅವಶ್ಯಕವಲ್ಲ.

c. ಒಂದು ನಿಯಮವು ಅನ್ಯಾಯಯುತವೇ ಎಂದು ನಿರ್ಧರಿಸಲು ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳು ಇವುಗಳನ್ನು ಒಳಗೊಂಡಿವೆ-

   i. ಆರ್ಥಿಕ ಒಪ್ಪಂದದಲ್ಲಿ ಹೇಳಲಾದ ಆರ್ಥಿಕ ಉತ್ಪನ್ನ ಅಥವಾ ಹಣಕಾಸಿನ ಸೇವೆಗಳ ಸ್ವರೂಪ;

   ii. ನಿಯಮದ ಪಾರದರ್ಶಕತೆಯ ವ್ಯಾಪ್ತಿ;

** ಸರಕು ಎಕ್ಸ್ ಚೇಂಜ್‌ನಿಂದ ನೀಡಲ್ಪಡುವ ಒಪ್ಪಂದಗಳು

   iii. ಒಬ್ಬ ಗ್ರಾಹಕರು ಇಂಥದೇ ಆರ್ಥಿಕ ಉತ್ಪನ್ನಗಳು ಅಥವಾ ಆರ್ಥಿಕ ಸೇವೆಗಳಿಗಾಗಿ ಇದನ್ನು ಇತರ ಹಣಕಾಸಿನ ಒಪ್ಪಂದಗಳ ಜೊತೆ ಹೋಲಿಸಲು ನಿಯಮವು ಎಷ್ಟರ ಮಟ್ಟಿಗೆ ಅನುಮತಿಸುತ್ತದೆ; ಮತ್ತು

   iv. ಒಟ್ಟಾರೆಯಾಗಿ ಆರ್ಥಿಕ ಒಪ್ಪಂದ ಮತ್ತು ಅದು ಅವಲಂಬಿತವಾಗಿರುವ ಯಾವುದೇ ಇತರ ಒಪ್ಪಂದದ ನಿಯಮಗಳು.

d. ಒಂದು ನಿಯಮವು ಹೀಗಿದ್ದಲ್ಲಿ ಪಾರದರ್ಶಕವಾಗಿರುತ್ತದೆ-

   i. ಗ್ರಾಹಕರು ಅರ್ಥಮಾಡಿಕೊಳ್ಳುವ ಸಾಧ್ಯತೆಯಿರುವ ಸರಳವಾದ ಭಾಷೆಯಲ್ಲಿ ವ್ಯಕ್ತಪಡಿಸಿದ್ದಲ್ಲಿ;

   ii. ಸ್ಪುಟವಾಗಿದ್ದು ಮತ್ತು ಸ್ಪಷ್ಟವಾಗಿ ನಿರೂಪಿಸಿದ್ದಲ್ಲಿ; ಮತ್ತು

   iii. ನಿಯಮದಿಂದ ಪರಿಣಾಮಕ್ಕೊಳಗಾಗುವ ಗ್ರಾಹಕರಿಗೆ ಸುಲಭವಾಗಿ ಲಭ್ಯವಿದ್ದಲ್ಲಿ.

e. ಅಂಶ 11.A.c, ಅಡಿಯಲ್ಲಿ ಒಂದು ಆರ್ಥಿಕ ಒಪ್ಪಂದದ ನಿಯಮವು ಅನ್ಯಾಯಯುತವಾಗಿತ್ತೆಂದು ಕಂಡುಬಂದಲ್ಲಿ ಆ ಅನ್ಯಾಯದ ನಿಯಮವಿಲ್ಲದೇ ಆರ್ಥಿಕ ಒಪ್ಪಂದವು ಜಾರಿಯಾಗಬಹುದಾದ ಮಟ್ಟಿಗೆ ಪಕ್ಷಗಳು ಆರ್ಥಿಕ ಒಪ್ಪಂದದ ಉಳಿದ ನಿಯಮಗಳಿಗೆ ಬದ್ಧರಾಗಿರುವುದು ಮುಂದುವರಿಯುತ್ತದೆ.

11.B.

a. "ಚರ್ಚಿಸಿರದ ಒಪ್ಪಂದವೆಂದರೆ" ಅಂಶ 11.C.ಯಲ್ಲಿ ಒಳಗೊಂಡಿರುವ ನಿಯಮಗಳನ್ನು ಹೊರತುಪಡಿಸಿ (ಕೆಳಗೆ ನೀಡಲಾಗಿದೆ) ಆರ್ಥಿಕ ಒಪ್ಪಂದದಲ್ಲಿರುವ ಪಕ್ಷಗಳ ನಡುವೆ ಚರ್ಚೆಗೊಳಗಾಗದ ನಿಯಮಗಳಾಗಿವೆ ಮತ್ತು ಅದು ಇವುಗಳನ್ನು ಒಳಗೊಂಡಿದೆ -

 i. ಗ್ರಾಹಕರಿಗೆ ಹೋಲಿಸಿದಲ್ಲಿ ಸದಸ್ಯರು ಆರ್ಥಿಕ ಒಪ್ಪಂದದ ನಿಯಮಗಳನ್ನು ನಿರ್ಧರಿಸುವಲ್ಲಿ ಗಣನೀಯವಾಗಿ ಹೆಚ್ಚಿನ ಚೌಕಾಶಿಯ ಶಕ್ತಿಯನ್ನು ಹೊಂದಿರುವ ಒಂದು ಆರ್ಥಿಕ ಒಪ್ಪಂದ; ಮತ್ತು

 ii. ಪ್ರಮಾಣಿತ ನಮೂನೆ ಒಪ್ಪಂದ.

b. "ಪ್ರಮಾಣಿತ ನಮೂನೆ ಒಪ್ಪಂದ"ವೆಂದರೆ ಅಂಶ 11.C.ಯಲ್ಲಿ ಒಳಗೊಂಡಿರುವ ನಿಯಮಗಳನ್ನು ಹೊರತುಪಡಿಸಿ ಗ್ರಾಹಕರು ಚೌಕಾಶಿ ಮಾಡಲು ಗಣನೀಯವಾಗಿ ಸಾಧ್ಯವಿರದ ಒಂದು ಒಪ್ಪಂದವೆಂದಾಗಿದೆ.

c. ಆರ್ಥಿಕ ಒಪ್ಪಂದದ ಕೆಲವು ನಿಯಮಗಳನ್ನು ನಮೂನೆಯಲ್ಲಿ ಚರ್ಚಿಸಿದ್ದರೂ ಹಣಕಾಸಿನ ಒಪ್ಪಂದವನ್ನು ಇವುಗಳು ಸೂಚಿಸಿದ್ದಲ್ಲಿ ಚರ್ಚಿಸಿರದ ಒಪ್ಪಂದವೆಂದು ಪರಿಗಣಿಸಲಾಗುತ್ತದೆ -

 i. ಆರ್ಥಿಕ ಒಪ್ಪಂದದ ಒಂದು ಒಟ್ಟಾರೆಯಾದ ಮತ್ತು ಗಣನೀಯವಾದ ಮೌಲ್ಯಮಾಪನ; ಮತ್ತು

 ii. ಆರ್ಥಿಕ ಒಪ್ಪಂದದ ಗಣನೀಯ ಸಂದರ್ಭಗಳು

d. ಆರ್ಥಿಕ ಒಪ್ಪಂದವು ಚರ್ಚಿಸಿರದ ಒಪ್ಪಂದವೆನ್ನುವ ಒಂದು ವ್ಯಾಜ್ಯದಲ್ಲಿ, ಹೀಗಿಲ್ಲವೆಂದು ಸಾಬೀತುಪಡಿಸುವ ಹೊಣೆಗಾರಿಕೆ ಸದಸ್ಯರದ್ದಾಗಿರುತ್ತದೆ.

11. C.

a. ಮೇಲೆ ಹೇಳಿರುವುದು ಒಂದು ಆರ್ಥಿಕ ಒಪ್ಪಂದದ ನಿಯಮಗಳು ಅವು ಹೀಗಿದ್ದಲ್ಲಿ ಅನ್ವಯಿಸುವುದಿಲ್ಲ -

 i. ಆರ್ಥಿಕ ಒಪ್ಪಂದದ ವಿಷಯವನ್ನು ವಿವರಿಸುತ್ತದೆ;

 ii. ಆರ್ಥಿಕ ಒಪ್ಪಂದದಡಿಯಲ್ಲಿ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯ ಸರಬರಾಜಿಗೆ ನೀಡಲಾದ ಅಥವಾ ನೀಡಬೇಕಾಗಿರುವ ಬೆಲೆಯನ್ನು ನಿರ್ಧರಿಸುತ್ತದೆ ಮತ್ತು ಗ್ರಾಹಕರಿಗೆ ಸ್ಪಷ್ಟವಾಗಿ ಬಹಿರಂಗಪಡಿಸಲಾಗಿದೆ; ಅಥವಾ

 iii. ಯಾವುದೇ ಕಾನೂನು ಅಥವಾ ನಿಯಮಗಳಡಿಯಲ್ಲಿ ಅಗತ್ಯವಿದೆ, ಅಥವಾ ಸ್ಪಷ್ಟವಾಗಿ ಅನುಮತಿಸಲಾಗಿದೆ.

b. ಅಂಶ 11.C ಅಡಿಯಲ್ಲಿನ ವಿನಾಯಿತಿಯು ಯಾವುದೇ ನಿರ್ದಿಷ್ಟ ಘಟನೆಯು ಸಂಭವಿಸುವುದನ್ನು ಅಥವಾ ಸಂಭವಿಸಿರದ್ದನ್ನು ಅವಲಂಬಿಸಿರುವ ಪಾವತಿಯ ಜೊತೆ ವ್ಯವಹರಿಸುವ ಒಂದು ನಿಬಂಧನೆಗೆ ಅನ್ವಯಿಸುವುದಿಲ್ಲ.

12. ಸದಸ್ಯರು ಹಾಗೂ ಅಧಿಕೃತ ವ್ಯಕ್ತಿಯು ಖಾತೆ ತೆರೆಯುವ ಫಾರಂನಲ್ಲಿರುವಂತೆ ಗ್ರಾಹಕನಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಮತ್ತು ಇನ್ನಾವುದಾದರೂ ವಿವರಗಳನ್ನು ಗೌಪ್ಯವಾಗಿ ಇರಿಸಬೇಕು ಮತ್ತು ಅದನ್ನು ಅನ್ಯ ವ್ಯಕ್ತಿ/ಪ್ರಾಧಿಕಾರಕ್ಕೆ ಬಹಿರಂಗಪಡಿಸುವಂತಿಲ್ಲ, ಆದರೆ ಯಾವುದೇ ಕಾನೂನು/ನಿಯಂತ್ರಣ ಪ್ರಾಧಿಕಾರವು ಕೋರಿದರೆ ಅದಕ್ಕೆ ಬಹಿರಂಗಪಡಿಸಬೇಕಾಗುತ್ತದೆ. ಆದರೆ, ಸದಸ್ಯರು ತನ್ನ ಗ್ರಾಹಕನ ಸ್ಪಷ್ಟವಾದ ಅನುಮತಿಯನ್ನು ಪಡೆದ ನಂತರ ಅನ್ಯ ವ್ಯಕ್ತಿ/ ಪ್ರಾಧಿಕಾರಕ್ಕೆ ಗ್ರಾಹಕನ ಬಗೆಗಿನ ಮಾಹಿತಿಯನ್ನು ಬಹಿರಂಗಪಡಿಸಬಹುದು.

13. A. ವೈಯಕ್ತಿಕ ಮಾಹಿತಿ ಮತ್ತು ಗೌಪ್ಯತೆಯ ರಕ್ಷಣೆ

a. "ವೈಯಕ್ತಿಕ ಮಾಹಿತಿ"ಯೆಂದರೆ ಒಬ್ಬ ಗ್ರಾಹಕರಿಗೆ ಸಂಬಂಧಿಸಿದ ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಒಬ್ಬ ಗ್ರಾಹಕರನ್ನು ಗುರುತಿಸುವುದನ್ನು ಸಾಧ್ಯವಾಗಿಸುವ ಯಾವುದೇ ಮಾಹಿತಿಯಾಗಿದೆ ಹಾಗೂ ಅದು ಇವುಗಳನ್ನು ಒಳಗೊಂಡಿದೆ -

 i. ಹೆಸರು ಮತ್ತು ಸಂಪರ್ಕ ಮಾಹಿತಿ;

 ii. ಬಯೋಮೆಟ್ರಿಕ್ ಮಾಹಿತಿ, ವ್ಯಕ್ತಿಗಳಾಗಿದ್ದಲ್ಲಿ

 iii. ಹಣಕಾಸು ಉತ್ಪನ್ನಗಳಲ್ಲಿನ ವ್ಯವಹಾರಕ್ಕೆ ಅಥವಾ ಅವುಗಳ ಹಿಡುವಳಿಗಳಿಗೆ ಸಂಬಂಧಿಸಿದ ಮಾಹಿತಿ

iv. ಹಣಕಾಸಿನ ಸೇವೆಗಳ ಬಳಕೆಗೆ ಸಂಬಂಧಿಸಿದ ಮಾಹಿತಿ; ಅಥವಾ

v. ನಿರ್ದಿಷ್ಟಪಡಿಸಬಹುದಾದ ಇಂತಹ ಇತರ ಮಾಹಿತಿ.

13. B.

a. ಒಬ್ಬ ಸದಸ್ಯರು ಇವುಗಳನ್ನು ಮಾಡಬೇಕು-

i. ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯನ್ನು ಒದಗಿಸುವ ಅಗತ್ಯವಿರುವದಕ್ಕೆ ಮೀರಿದ ಒಬ್ಬ ಗ್ರಾಹಕರಿಗೆ ಸಂಬಂಧಿಸಿದ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಬಾರದು;

ii. ಗ್ರಾಹಕರಿಗೆ ಸಂಬಂಧಿಸಿದ ವೈಯಕ್ತಿಕ ಮಾಹಿತಿಯ ಗೌಪ್ಯತೆಯನ್ನು ಕಾಯ್ದುಕೊಳ್ಳುವುದು ಮತ್ತು ಅಂಶ 13. B.b., ಅಡಿಯಲ್ಲಿ ಸ್ಪಷ್ಟವಾಗಿ ಅನುಮತಿ ರೀತಿಯಲ್ಲಿ ಅಲ್ಲದೇ ಬೇರೆ ಯಾವ ರೀತಿಯಲ್ಲೂ ಮೂರನೇ ವ್ಯಕ್ತಿಗೆ ಅದನ್ನು ಬಹಿರಂಗಪಡಿಸದಿರುವುದು;

iii. ಅನ್ವಯವಾಗುವ ಗ್ರಾಹಕರಿಗೆ ಸಂಬಂಧಿಸಿದ ಯಾವುದೇ ವೈಯಕ್ತಿಕ ಮಾಹಿತಿ ನಿಖರವಾಗಿದೆ, ಇತ್ತೀಚಿನದ್ದಾಗಿದೆ ಹಾಗೂ ಸಂಪೂರ್ಣವಾಗಿದೆಯೆಂದು ಖಚಿತಪಡಿಸಿಕೊಳ್ಳಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನೂ ಮಾಡುವುದು;

iv. ನಿಯಂತ್ರಕ ನಿಬಂಧನೆಗಳು ಸೂಚಿಸುವ ಯಾವುದೇ ಹೊರತುಪಡಿಕೆಗಳಿಗೆ ಒಳಪಟ್ಟು ಗ್ರಾಹಕರು ತಮ್ಮ ವೈಯಕ್ತಿಕ ಮಾಹಿತಿಗೆ ಸೂಕ್ತವಾದ ಪ್ರವೇಶ ಹೊಂದಿರುತ್ತಾರೆಂದು ಖಚಿತಪಡಿಸಿಕೊಳ್ಳುವುದು; ಮತ್ತು

v. ಸದಸ್ಯರು ಹೊಂದಿರುವ ವೈಯಕ್ತಿಕ ಮಾಹಿತಿ ನಿಖರವಾಗಿದೆ, ಇತ್ತೀಚಿನದ್ದಾಗಿದೆ ಮತ್ತು ಸಂಪೂರ್ಣವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಗ್ರಾಹಕರಿಗೆ ಅವರ ವೈಯಕ್ತಿಕ ಮಾಹಿತಿಯನ್ನು ಮಾರ್ಪಾಡು ಮಾಡಿಸಲು ಪರಿಣಾಮಕಾರಿ ಅವಕಾಶವನ್ನು ನೀಡುವುದು.

b. ಒಬ್ಬ ಸದಸ್ಯರು ಮೂರನೇ ವ್ಯಕ್ತಿಗೆ ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ಹೀಗಿದ್ದಲ್ಲಿ ಮಾತ್ರ ಬಹಿರಂಗಪಡಿಸಬಹುದು -

i. ಗ್ರಾಹಕರಿಗೆ ಒಪ್ಪಿಗೆ ನೀಡುವುದನ್ನು ತಿರಸ್ಕರಿಸಲು ಸೂಕ್ತ ಅವಕಾಶವನ್ನು ನೀಡಿದ ನಂತರ ಬಹಿರಂಗಪಡಿಸುವಿಕೆಗಾಗಿ ಗ್ರಾಹಕರ ಲಿಖಿತ ಪೂರ್ವ ಸಮ್ಮತಿಯನ್ನು ಪಡೆದಿದ್ದಲ್ಲಿ;

ii. ಗ್ರಾಹಕರು ಬಹಿರಂಗಪಡಿಸುವಿಕೆಯನ್ನು ಹೀಗೆ ನಿರ್ದೇಶಿಸಿದ್ದಲ್ಲಿ;

iii. ನಿಯಂತ್ರಕ ಅಧಿಕಾರಿಯು ಬಹಿರಂಗಪಡಿಸುವಿಕೆಯನ್ನು ಅಂಗೀಕರಿಸಿದ್ದಾರೆ ಅಥವಾ ಆದೇಶಿಸಿದ್ದಾರೆ, ಮತ್ತು ಸಂಬಂಧಿತ ಕಾನೂನು ಅಥವಾ ನಿಯಮಗಳಡಿಯಲ್ಲಿ ನಿಷೇಧಿಸದ ಹೊರತು, ಗ್ರಾಹಕರು ಇಂಥ ಬಹಿರಂಗಪಡಿಸುವಿಕೆಯ ವಿರುದ್ಧ ಪ್ರತಿನಿಧಿಸಲು ಕಾನೂನು ಅಥವಾ ನಿಬಂಧನೆಗಳಡಿಯಲ್ಲಿ ಅವಕಾಶ ಹೊಂದಿದ್ದಾರೆ;

iv. ಬಹಿರಂಗಪಡಿಸುವಿಕೆಯ ಯಾವುದೇ ಕಾನೂನು ಅಥವಾ ನಿಯಮಗಳಡಿಯಲ್ಲಿ ಅಗತ್ಯವಾಗಿದೆ, ಮತ್ತು ಸಂಬಂಧಿತ ಕಾನೂನು ಅಥವಾ ನಿಯಮಗಳಡಿಯಲ್ಲಿ ನಿಷೇಧಿಸದ ಹೊರತು, ಗ್ರಾಹಕರು ಇಂಥ ಬಹಿರಂಗಪಡಿಸುವಿಕೆಯ ವಿರುದ್ಧ ಪ್ರತಿನಿಧಿಸಲು ಕಾನೂನು ಅಥವಾ ನಿಬಂಧನೆಗಳಡಿಯಲ್ಲಿ ಅವಕಾಶ ಹೊಂದಿದ್ದಾರೆ;

v. ಸದಸ್ಯರು ಹೀಗೆ ಮಾಡಿದ್ದಲ್ಲಿ ವೇಳೆ ಬಹಿರಂಗಪಡಿಸುವಿಕೆಯು ಗ್ರಾಹಕರಿಗೆ ನೀಡಲಾಗುತ್ತಿರುವ ಆರ್ಥಿಕ ಉತ್ಪನ್ನ ಅಥವಾ ಆರ್ಥಿಕ ಸೇವೆಯ ಒದಗಿಸುವಿಕೆಗೆ ನೇರವಾಗಿ ಸಂಬಂಧಿಸಿದೆ-

1. ವೈಯಕ್ತಿಕ ಮಾಹಿತಿಯನ್ನು ಮೂರನೇ ವ್ಯಕ್ತಿಯ ಹಂಚಿಕೊಳ್ಳಬಹುದು ಎಂದು ಮುಂಚಿತವಾಗಿಯೇ ಗ್ರಾಹಕರಿಗೆ ಮಾಹಿತಿ ನೀಡಿದ್ದಲ್ಲಿ; ಮತ್ತು

2. ಮೂರನೇ ಪಕ್ಷವು ಈ ಭಾಗದಡಿಯಲ್ಲಿ ಅಗತ್ಯವಿರುವ ಹಾಗೇ ವೈಯಕ್ತಿಕ ಮಾಹಿತಿಯ ಗೌಪ್ಯತೆಯನ್ನು ನಿರ್ವಹಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳಲು ವ್ಯವಸ್ಥೆ ಮಾಡುವುದು; ಅಥವಾ

vi. ಸದಸ್ಯರು ಈ ಭಾಗದಲ್ಲಿ ಅಗತ್ಯವಿದ್ದ ಹಾಗೇ ವೈಯಕ್ತಿಕ ಮಾಹಿತಿಯ ಗೌಪ್ಯತೆಯನ್ನು ನಿರ್ವಹಿಸಲು ಮೂರನೆಯ ಪಕ್ಷದ ಜೊತೆ ಏರ್ಪಾಡು ಹೊಂದಿದ್ದಲ್ಲಿ ಬಹಿರಂಗಪಡಿಸುವಿಕೆಯನ್ನು ನಿಜವಾದ ಅಥವಾ ಸಂಭವನೀಯ ಮೋಸ, ಅನಧಿಕೃತ ವ್ಯವಹಾರಗಳು ಅಥವಾ ಹಕ್ಕಿನ ಘೋಷಣೆಗಳ ವಿರುದ್ಧದ ರಕ್ಷಣೆಗಾಗಿ ಮಾಡಲಾಗುತ್ತದೆ. -

c. "ಮೂರನೇ ಪಕ್ಷ"ವೆಂದರೆ ಸಂಬಂಧಪಟ್ಟ ಸದಸ್ಯರನ್ನು ಹೊರತುಪಡಿಸಿ ಯಾವುದೇ ಸದಸ್ಯರಾಗಿದ್ದು ಇದು ಸದಸ್ಯರಾಗಿ ಅದೇ ಸಮೂಹಕ್ಕೆ ಸೇರಿದ ವ್ಯಕ್ತಿಯನ್ನೂ ಒಳಗೊಂಡಿರುತ್ತದೆ.

14. A. ಆರಂಭದಲ್ಲಿ ಮತ್ತು ಮುಂದುವರೆಯುವ ಆಧಾರದ ಮೇಲೆ ನ್ಯಾಯೋಚಿತವಾದ ಬಹಿರಂಗಪಡಿಸುವಿಕೆಯ ಅವಶ್ಯಕತೆ

a. ಗ್ರಾಹಕರು ಒಂದು ಮಾಹಿತಿಪೂರ್ಣ ವ್ಯವಹಾರದ ನಿರ್ಧಾರವನ್ನು ಕೈಗೊಳ್ಳಲು ಅಗತ್ಯವಾಗಿರುವ ಮಾಹಿತಿಯ ನ್ಯಾಯೋಚಿತ ಬಹಿರಂಗಪಡಿಸುವಿಕೆಯನ್ನು ಸದಸ್ಯರು ಖಾತ್ರಿಪಡಿಸಿಕೊಳ್ಳಬೇಕು.

b. ನ್ಯಾಯೋಚಿತ ಬಹಿರಂಗಪಡಿಸುವಿಕೆಗಾಗಿ ಮಾಹಿತಿಯನ್ನು ಹೀಗೆ ನೀಡಬೇಕು -

i. ಗ್ರಾಹಕರಿಗೆ ಮಾಹಿತಿಯನ್ನು ಅರ್ಥಮಾಡಿಕೊಳ್ಳಲು ಸೂಕ್ತ ಸಮಯ ನೀಡುವಂತೆ ಗ್ರಾಹಕರು ಆರ್ಥಿಕ ಒಪ್ಪಂದವನ್ನು ಮಾಡಿಕೊಳ್ಳುವ ಸಾಕಷ್ಟು ಮೊದಲು;

ii. ಲಿಖಿತವಾಗಿ ಹಾಗೂ ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿದ ಗ್ರಾಹಕರು ಅರ್ಥ ಮಾಡಿಕೊಳ್ಳುವ ಸಾಧ್ಯತೆಯಿರುವ ರೀತಿಯಲ್ಲಿ; ಮತ್ತು

iii. ಗ್ರಾಹಕರು ಆರ್ಥಿಕ ಉತ್ಪನ್ನಗಳು ಅಥವಾ ಹಣಕಾಸು ಸೇವೆಗಳನ್ನು ಇತರ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ಸಮಂಜಸವಾದ ಹೋಲಿಕೆ ಮಾಡಲು ಸಾಧ್ಯವಾಗುವ ರೀತಿಯಲ್ಲಿ.

c. ಒಬ್ಬ ಗ್ರಾಹಕರಿಗೆ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ಸಂಬಂಧಿಸಿದಂತೆ ಬಹಿರಂಗಪಡಿಸಬೇಕಾದ ಮಾಹಿತಿಯ ಪ್ರಕಾರಗಳು, ಇವು ಇವುಗಳನ್ನು ಒಳಗೊಂಡಿರಬಹುದು-

i. ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯ ಪ್ರಮುಖ ವೈಶಿಷ್ಟ್ಯಗಳು, ಅದರ ಪ್ರಯೋಜನಗಳು ಮತ್ತು ಗ್ರಾಹಕರಿಗಿರುವ ಅಪಾಯಗಳೂ ಸೇರಿದಂತೆ;

ii. ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ನೀಡಬೇಕಾದ ಪರಿಗಣನೆ ಅಥವಾ ಪರಿಗಣನೆಯನ್ನು ನೀಡಬೇಕಾದ ವಿಧಾನ;

iii. ಆರ್ಥಿಕ ಉತ್ಪನ್ನ ಅಥವಾ ಆರ್ಥಿಕ ಒಪ್ಪಂದದಲ್ಲಿ ಯಾವುದೇ ನಿಯಮದ ಇರುವಿಕೆ, ಹೊರಗಿಡುವಿಕೆ ಅಥವಾ ಪರಿಣಾಮ;

iv. ಗುರುತು, ನಿಯಂತ್ರಕ ಸ್ಥಿತಿ ಮತ್ತು ಸದಸ್ಯತ್ವವೂ ಸೇರಿದಂತೆ ಸದಸ್ಯರ ಸ್ವರೂಪ, ಲಕ್ಷಣಗಳು ಮತ್ತು ಹಕ್ಕುಗಳು;

v. ಸದಸ್ಯರ ಸಂಪರ್ಕ ವಿವರಗಳು ಮತ್ತು ಸದಸ್ಯರು ಮತ್ತು ಗ್ರಾಹಕರ ನಡುವೆ ಬಳಸಬೇಕಾದ ಸಂವಹನದ ವಿಧಾನಗಳು;

vi. ನಿರ್ದಿಷ್ಟ ಅವಧಿಯಲ್ಲಿ ಆರ್ಥಿಕ ಒಪ್ಪಂದವನ್ನು ರದ್ದುಗೊಳಿಸುವ ಗ್ರಾಹಕರ ಹಕ್ಕುಗಳು; ಅಥವಾ

vii. ಯಾವುದೇ ಕಾನೂನು ಅಥವಾ ನಿಯಮಗಳಡಿಯಲ್ಲಿ ಗ್ರಾಹಕರ ಹಕ್ಕುಗಳು.

14. B.

a. ಸದಸ್ಯರು ಅವರು ನೀಡುವ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯನ್ನು ಪಡೆಯುತ್ತಿರುವ ಗ್ರಾಹಕರಿಗೆ ಕೆಳಗಿನ ಮುಂದುವರೆಯುವ ಬಹಿರಂಗಪಡಿಸುವಿಕೆಗಳನ್ನು ಮಾಡಬೇಕು -

i. ಗ್ರಾಹಕರು ಆರಂಭದಲ್ಲಿ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯನ್ನು ಪಡೆದಾಗ ಅಂಶ 14.A ಅಡಿಯಲ್ಲಿ ಬಹಿರಂಗಪಡಿಸಬೇಕಾದ ಮಾಹಿತಿಯಲ್ಲಿನ ಯಾವುದೇ ವಸ್ತುಶಃ ಬದಲಾವಣೆ;

ii. ಗ್ರಾಹಕರು ಹೊಂದಿರುವ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯಲ್ಲಿನ ಹಕ್ಕುಗಳು ಅಥವಾ ಹಿತಾಸಕ್ತಿಗಳನ್ನು ನಿರ್ಣಯಿಸಲು ಬೇಕಾಗುವ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ಸಂಬಂಧಿಸಿದ ಮಾಹಿತಿ; ಮತ್ತು

iii. ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಮಾಹಿತಿ.

b. ಒಂದು ನಿರಂತರ ಬಹಿರಂಗಪಡಿಸುವಿಕೆಯನ್ನು ಮಾಡಬೇಕು -

i. ಅನ್ವಯವಾಗುವ ಹಾಗೆ ಯಾವುದೇ ವಸ್ತುಶಃ ಬದಲಾವಣೆಯಿಂದ ಅಥವಾ ಸಮಂಜಸವಾದ ಆವರ್ತಕ ಮಧ್ಯಂತರಗಳೊಳಗೆ ಸೂಕ್ತವಾದ ಸಮಯದೊಳಗೆ; ಮತ್ತು

ii. ಲಿಖಿತವಾಗಿ ಹಾಗೂ ಆ ವರ್ಗಕ್ಕೆ ಸೇರಿದ ಗ್ರಾಹಕರು ಅರ್ಥ ಮಾಡಿಕೊಳ್ಳುವ ಸಾಧ್ಯತೆಯಿರುವ ರೀತಿಯಲ್ಲಿ.

**ಮಾರ್ಜಿನುಗಳು**

15. ಕಾಲಕಾಲಕ್ಕೆ ಗ್ರಾಹಕನು ವ್ಯಾಪಾರ ಮಾಡುವ ವಿಭಾಗ(ಗಳಿಗೆ)ಕ್ಕೆ SEBI ಸೂಚಿಸುವ ಅಥವಾ ಸದಸ್ಯರು ಅಥವಾ ಎಕ್ಸ್‌ಚೇಂಜ್ ಅಗತ್ಯವೆಂದು ಪರಿಗಣಿಸುವ ಮತ್ತು ಅನ್ವಯವಾಗುವ ಆರಂಭಿಕ ಮಾರ್ಜಿನ್, ವಿದ್‌ಹೋಲ್ಡಿಂಗ್ ಮಾರ್ಜಿನ್ (ಮೂಲದ ಲ್ಲೇ ಮುರಿದುಕೊಳ್ಳುವ), ವಿಶೇಷ ಮಾರ್ಜಿನ್ ಅಥವಾ ಇತರ ಅಂತಹ ಮಾರ್ಜಿನುಗಳನ್ನು ಗ್ರಾಹಕನು ಪಾವತಿಸಬೇಕು. ಸದಸ್ಯರು ತನ್ನದೇ ಸ್ವಂತ ವಿವೇಚನೆಯ ಮೇರೆಗೆ ಹೆಚ್ಚುವರಿ ಮಾರ್ಜಿನನ್ನು (ಎಕ್ಸ್‌ಚೇಂಜ್/ ಅಥವಾ SEBI ಕೋರಿರದಿದ್ದರೂ) ಸಂಗ್ರಹಿಸಲು ಅನುಮತಿಯಿದೆ ಮತ್ತು ಗ್ರಾಹಕನು ಅಂತಹ ಮಾರ್ಜಿನುಗಳನ್ನು ನಿಗದಿತ ಸಮಯದ ಒಳಗೆ ಪಾವತಿಸಬೇಕು.
16. ಮಾರ್ಜಿನುಗಳನ್ನು ಪಾವತಿಸಿದ ಕ್ಷಣಕ್ಕೆ ಎಲ್ಲ ಬಾಕಿಗಳನ್ನು ಪಾವತಿಸಿದಂತೆ ಆಗುವುದಿಲ್ಲ ಎಂಬುದನ್ನು ಗ್ರಾಹಕನು ತಿಳಿದಿರಬೇಕು. ಮಾರ್ಜಿನುಗಳನ್ನು ಬಿಡದೆ ಪಾವತಿಸುತ್ತಿದ್ದರೂ ಗ್ರಾಹಕನು ತನ್ನ ವ್ಯಾಪಾರದ ಲೆಕ್ಕ ಚುಕ್ತಮಾಡುವಾಗ ಕರಾರಿನ ಪ್ರಕಾರ ನೀಡಬೇಕಾದ ಇತರ ಮೊತ್ತಗಳನ್ನು ಪಾವತಿಸಬೇಕಾಗುತ್ತದೆ (ಅಥವಾ ಸ್ವೀಕರಿಸಲು ಹಕ್ಕಿರುತ್ತದೆ).

**ವ್ಯವಹಾರಗಳು ಮತ್ತು ಲೆಕ್ಕ ಫೈಸಲುಗಳು**

17. ಸದಸ್ಯರು ಮತ್ತು ಗ್ರಾಹಕರು ಪರಸ್ಪರ ಒಪ್ಪಿರುವಂತೆ ಲಿಖಿತ ಅಥವಾ ಇನ್ಯಾವುದೇ ರೀತಿಯಲ್ಲಿ ಗ್ರಾಹಕನು ಒಂದು ಸರಕು/ಡೆರಿವೇಟಿವುಗಳನ್ನು ಕೊಳ್ಳಲು/ಮಾರಲು ಆದೇಶ ನೀಡಬಹುದು. ಸದಸ್ಯರು ಈ ನಿಟ್ಟಿನಲ್ಲಿ ನೀಡಿರುವ ಶಾಸನಾತ್ಮಕ ಬದ್ಧತೆಗಳು ಪೂರೈಸಲ್ಪಟ್ಟಿವೆಯೆಂದು ಖಚಿತಪಡಿಸಿಕೊಳ್ಳಬೇಕು. ಸದಸ್ಯರು, ಗ್ರಾಹಕನಿಗೆ ನೀಡಿರುವ ಯುನಿಕ್ ಕ್ಲೈಂಟ್ ಕೋಡ್‌ನಲ್ಲಿ ಮಾತ್ರವೇ ಗ್ರಾಹಕನ ವ್ಯಾಪಾರಗಳ ಆದೇಶಗಳನ್ನು ಕೊಡಬಹುದು ಮತ್ತು ಜಾರಿಗೊಳಿಸಬಹುದು .
18. ಸದಸ್ಯರು, ಟ್ರೇಡಿಂಗ್/ಸೆಟಲ್ಮೆಂಟ್ ಚಕ್ರಗಳನ್ನು, ಡೆಲಿವರಿ/ಪಾವತಿ ವೇಳಾಪಟ್ಟಿಗಳನ್ನು, ಕಾಲಕಾಲಕ್ಕೆ ಅವುಗಳಲ್ಲಿ ಆಗುವ ಬದಲಾವಣೆಗಳನ್ನು ಗ್ರಾಹಕನಿಗೆ ತಿಳಿಸುತ್ತಿರಬೇಕು. ಅದೇ ರೀತಿ, ತನ್ನ ಟ್ರೇಡ್‌ಗೆ ಸಂಬಂಧಪಟ್ಟ ವೇಳಾಪಟ್ಟಿಗಳ/ಕಾರ್ಯವಿಧಾನಗಳನ್ನು ಅನುಸರಿಸುವುದು ಗ್ರಾಹಕನ ಜವಾಬ್ದಾರಿಯಾಗಿರುತ್ತದೆ.
19. ಸದಸ್ಯರು, ಗ್ರಾಹಕನು ಜಮಾ ಮಾಡಿದ ಹಣವನ್ನು ಒಂದು ಪ್ರತ್ಯೇಕ ಖಾತೆಯಲ್ಲಿ ಇಡಬೇಕು, ಅದು ಅವನ/ತನ್ನ ಸ್ವಂತದ ಖಾತೆ ಅಥವಾ ಇನ್ಯಾವುದೇ ಗ್ರಾಹಕನ ಖಾತೆಯಿಂದ ಪ್ರತ್ಯೇಕವಾಗಿರಬೇಕು ಮತ್ತು ಸದಸ್ಯರು ಅದನ್ನು ತನಗಾಗಲಿ ಅಥವಾ ಇತರ ಯಾವುದೇ ಗ್ರಾಹಕನಿಗಾಗಲಿ ಅಥವಾ SEBI ನಿಯಮಾವಳಿಗಳು, ಸುತ್ತೋಲೆಗಳು, ನೋಟಿಸುಗಳು, ಮಾರ್ಗದರ್ಶಕಗಳು ಮತ್ತು/ಅಥವಾ ಎಕ್ಸ್‌ಚೇಂಜಿನ ನಿಯಮಾವಳಿಗಳು, ವ್ಯಾಪಾರ ನಿಯಮಗಳು, ಬೈಲಾಗಳು, ಸುತ್ತೋಲೆಗಳು ಮತ್ತು ನೋಟಿಸುಗಳಲ್ಲಿ ತಿಳಿಸಿರುವ ಉದ್ದೇಶಗಳಲ್ಲದೇ ಇತರ ಉದ್ದೇಶಗಳಿಗೆ ಬಳಸಬಾರದು.
20. ಒಂದ ವೇಳೆ ಎಕ್ಸ್‌ಚೇಂಜ್ ತಾನಾಗಿಯೇ ಗ್ರಾಹಕನ ಪರವಾಗಿ ಮಾಡುವ ಟ್ರೇಡ್ ಕೂಡ ಸೇರಿದಂತೆ ಎಲ್ಲ ಟ್ರೇಡುಗಳನ್ನು ರದ್ದುಪಡಿಸಿದ ರೆ ಸದಸ್ಯರು ಗ್ರಾಹಕನಿಗೆ ಸಂಬಂಧಿಸಿದ ಅಂತಹ ಒಪ್ಪಂದಗಳನ್ನು ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತಾರೆ.
21. ಎಕ್ಸ್‌ಚೇಂಜಿನಲ್ಲಿ ನಡೆಯುವ ವ್ಯವಹಾರಗಳು ಟ್ರೇಡ್ ನಡೆಯುವ ಎಕ್ಸ್‌ಚೇಂಜ್‌ನ ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ

ನಿಯಮಗಳು ಮತ್ತು ಅವುಗಳ ಅಡಿಯಲ್ಲಿ ನೀಡಿರುವ ಸುತ್ತೋಲೆಗಳಿಗೆ / ನೋಟಿಸುಗಳಿಗೆ ಒಳಪಟ್ಟಿರುತ್ತವೆ, ಮತ್ತು ಅಂತಹ ಟ್ರೇಡಿನ ಎಲ್ಲ ಪಕ್ಷಗಳೂ ಎಕ್ಸ್‌ಚೇಂಜ್‌ನ ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಅವುಗಳ ಅಡಿಯಲ್ಲಿ ನೀಡಿರುವ ಸುತ್ತೋಲೆಗಳಲ್ಲಿ/ ನೋಟಿಸುಗಳಲ್ಲಿ ಹೇಳಿರುವುದನ್ನು ಜಾರಿಗೆ ತರಲು ಅಂತಹ ಎಕ್ಸ್‌ಚೇಂಜುಗಳ ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ನಿರ್ದಿಷ್ಟವಾಗಿ ಹೇಳುವ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತಾರೆ.

**ಬ್ರೋಕರೇಜ್**

22. ಕಾಲ ಕಾಲಕ್ಕೆ ಜಾರಿಯಲ್ಲಿರುವಂತೆ, ಗ್ರಾಹಕನ ಖಾತೆಗೆ ಅನ್ವಯವಾಗುವಂತೆ, ಸದಸ್ಯರು ಗ್ರಾಹಕನಿಗೆ ನೀಡುವ ಸೇವೆಗಳಿಗೆ ಗ್ರಾಹಕನು ಬ್ರೋಕರೇಜ್ ಮತ್ತುಶಾಸನಬದ್ಧ ಸುಂಕಗಳನ್ನು ಪಾವತಿಸಬೇಕು. ಸದಸ್ಯರು, ಸಂಬಂಧಪಟ್ಟ ಸರಕು ಎಕ್ಸ್ ಚೇಂಜುಗಳು ಮತ್ತು/ ಅಥವಾ SEBI ನಿಯಮಾವಳಿಗಳು, ವ್ಯಾಪಾರ ನಿಯಮಗಳು ಅನುಮತಿಸಿರುವ ಗರಿಷ್ಠ ಬ್ರೋಕರೇಜ್‌ಗಿಂತ ಹೆಚ್ಚು ಬ್ರೋಕರೇಜನ್ನು ತೆಗೆದುಕೊಳ್ಳುವಂತಿಲ್ಲ.

**ಸಮಾಪನ ಮತ್ತು ಕ್ಲೋಸ್ ಔಟ್ ಸ್ಥಿತಿ**

23. ಒಂದು ವೇಳೆ ಗ್ರಾಹಕನು ಮಾರ್ಜಿನ್, ಬಾಕಿ ಮೊತ್ತಗಳು ಅಥವಾ ಇನ್ಯಾವುದೇ ಮೊತ್ತಗಳನ್ನು ಪಾವತಿಸದಿದ್ದರೆ ಸದಸ್ಯರು ತನ್ನ ಇತರ ಹಕ್ಕುಗಳನ್ನು ಕಳೆದುಕೊಳ್ಳದೆ (ಇದರಲ್ಲಿ ಮಧ್ಯಸ್ಥಿಕೆ ಒಪ್ಪಂದವೂ ಸೇರುತ್ತದೆ) ಗ್ರಾಹಕನ ಎಲ್ಲ ಅಥವಾ ಯಾವುದೇ ಸ್ಥಿತಿಗಳನ್ನು ಸಮಾಪನ / ಕ್ಲೋಸ್ ಔಟ್ ಮಾಡಿ ಬಂದ ಮೊತ್ತವನ್ನು ಗ್ರಾಹಕನ ಹೊಣೆಗಳು / ಬಾಧ್ಯತೆಗಳು, ಇತ್ಯಾದಿ ಏನಿವೆಯೋ ಅವುಗಳಿಗೆ ಹೊಂದಿಸಬಹುದು. ಅಂತಹ ಸಮಾಪನ / ಕ್ಲೋಸ್ ಔಟ್ ಸನ್ನಿವೇಶದಲ್ಲಿ ಉಂಟಾದ ಯಾವುದೇ ಮತ್ತು ಎಲ್ಲ ನಷ್ಟಗಳನ್ನು ಮತ್ತು ಹಣಕಾಸಿನ ಚಾರ್ಜ್‌ಗಳನ್ನು ಗ್ರಾಹಕನೇ ಭರಿಸಬೇಕಾಗುತ್ತದೆ .
24. ಒಂದು ವೇಳೆ ಗ್ರಾಹಕ ಸತ್ತರೆ ಅಥವಾ ಅವನು ಕೊಳ್ಳಲು ಅಥವಾ ಮಾರಲು ಆದೇಶಿಸಿರುವ ಸರಕುಗಳನ್ನು ಡೆಲಿವರ್ ಮಾಡಲು ಅಥವಾ ವರ್ಗಾವಣೆ ಮಾಡಲು, ಹಣ ಸ್ವೀಕರಿಸಲು ಅಥವಾ ಪಾವತಿಸಲು ಅಸಮರ್ಥನಾದರೆ ಅಂತಹ ಸಂದರ್ಭಗಳಲ್ಲಿ ಸದಸ್ಯರು ಗ್ರಾಹಕನ ವ್ಯವಹಾರವನ್ನು ಕ್ಲೋಸ್ ಔಟ್ ಮಾಡಿ ಏನಾದರೂ ನಷ್ಟ ಉಂಟಾದರೆ ಅದನ್ನು ಗ್ರಾಹಕನ ಸಂಪತ್ತಿಗೆ ಹೊಂದಿಸಬಹುದು . ಇದರಿಂದ ಬಂದ ಹೆಚ್ಚುವರಿ ಮೊತ್ತವನ್ನು ಗ್ರಾಹಕ ಅಥವಾ ಅವನ ನಾಮಿನಿಗಳು, ಉತ್ತರಾಧಿಕಾರಿಗಳು, ವಾರಸುದಾರರು ಮತ್ತು ಹಸ್ತಾಂತರ ಗ್ರಾಹಿಗಳು ಕ್ಲೇಮ್ ಮಾಡಾಬಹುದು. ಗ್ರಾಹಕನು ಗಮನಿಸಬೇಕು: ನಾಮಿನಿಯ ಪರವಾಗಿ ಮಾಡಿದ ನಿಧಿ / ಸರಕುಗಳು ವರ್ಗಾವಣೆ ಕಾನೂನು ಸಮ್ಮತ ವಾರಸುದಾರನ ವಿರುದ್ಧ ಸಿಂಧುವಾದ ನಿರ್ವಹಣೆಯಾಗಿರುತ್ತದೆ .

**ವ್ಯಾಜ್ಯ ಪರಿಹಾರ**

25. ತನ್ನ ಮೂಲಕ ನಡೆದ ಎಲ್ಲ ವ್ಯವಹಾರಗಳಿಗೆ ಸಂಬಂಧಿಸಿದ ದೂರುಗಳನ್ನು ಪರಿಹರಿಸಲು ಸದಸ್ಯರು ಸಹಕರಿಸಬೇಕು.
26. ಗ್ರಾಹಕ ಮತ್ತು ಸದಸ್ಯರು ಡಿಪಾಜಿಟ್, ಮಾರ್ಜಿನ್ ಹಣ, ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದೇ ಕ್ಲೇಮ್ ಮತ್ತು/ಅಥವಾ ವ್ಯಾಜ್ಯಗಳನ್ನು ಎಲ್ಲಿ ಟ್ರೇಡ್ ನಡೆದಿರುತ್ತದೋ ಅಲ್ಲಿನ ಎಕ್ಸ್‌ಚೇಂಜಿನ ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಅವುಗಳ ಅಡಿಯಲ್ಲಿ ಕಾಲ ಕಾಲಕ್ಕೆ ಜಾರಿಯಾಗುವ ಸುತ್ತೋಲೆಗಳು/ ನೋಟಿಸುಗಳ ಪ್ರಕಾರ ಮಧ್ಯಸ್ಥಿಕೆಗೆ ಒಪ್ಪಿಸಬೇಕು.
27. ವ್ಯಾಜ್ಯ ಪರಿಹಾರಕ್ಕಾಗಿ ಗ್ರಾಹಕನ / ಸದಸ್ಯರು ಅಧಿಕೃತ ಪ್ರತಿನಿಧಿ ನೀಡಿದ ಸೂಚನೆಗಳು ಅಂತಹ ಪ್ರತಿನಿಧಿಗೆ ಅಧಿಕಾರ ನೀಡುವ ಪತ್ರದಲ್ಲಿರುವ ಪ್ರಕಾರ ಗ್ರಾಹಕ/ಸದಸ್ಯರನ್ನು ಬಂಧಿಸುತ್ತವೆ.
28. ಪ್ರತಿ ಸದಸ್ಯರೂ ಅವರ ಎಲ್ಲಾ ಗ್ರಾಹಕರೂ ಪ್ರವೇಶಿಸಬಹುದಾದ ಪರಿಣಾಮಕಾರಿ ಕುಂದುಕೊರತೆಗಳ ಪರಿಹಾರ ವ್ಯವಸ್ಥೆಯನ್ನು ಹೊಂದಿರಬೇಕಾದ ಅವಶ್ಯಕತೆ
    a. ಒಬ್ಬ ಸದಸ್ಯರು ತಾವು ಒದಗಿಸಿದ ಆರ್ಥಿಕ ಉತ್ಪನ್ನಗಳು ಅಥವಾ ಹಣಕಾಸು ಸೇವೆಗಳಿಗೆ ಸಂಬಂಧಿಸಿದಂತೆ ಗ್ರಾಹಕರಿಂದ ಪಡೆಯಬಹುದಾದ ದೂರುಗಳನ್ನು ತನ್ನ ಪರವಾಗಿ ಸಕಾಲಿಕವಾಗಿ ಹಾಗೂ ನ್ಯಾಯೋಚಿತ ರೀತಿಯಲ್ಲಿ ಸ್ವೀಕರಿಸಲು ಮತ್ತು ಪರಿಹರಿಸಲು ಒಂದು ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದಿರಬೇಕು.

b. ಒಬ್ಬ ಸದಸ್ಯರು ಗ್ರಾಹಕರಿಗೆ ಅವರ ಜೊತೆಗಿನ ಬಾಂಧವ್ಯದ ಪ್ರಾರಂಭದಲ್ಲಿ ಹಾಗೂ ಗ್ರಾಹಕರಿಗೆ ಮಾಹಿತಿಯು ಅಗತ್ಯವಾಗಬಹುದಾದ ಇತರ ಸಮಯದಲ್ಲಿ ಇವುಗಳ ಬಗ್ಗೆ ಹೇಳಬೇಕು -

i. ಯಾವುದೇ ದೂರುಗಳಿಗೆ ಪರಿಹಾರವನ್ನು ಪಡೆಯುವ ಗ್ರಾಹಕರ ಹಕ್ಕು; ಮತ್ತು

ii. ತನ್ನ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲು ಮತ್ತು ಅವುಗಳನ್ನು ನಿವಾರಿಸಲು ಸದಸ್ಯರು ಅನುಸರಿಸುವ ಪ್ರಕ್ರಿಯೆಗಳು.

29. A. ಗ್ರಾಹಕರಿಗೆ ಸಲಹೆ ನೀಡುವ ಸೂಕ್ತತೆ

ಗ್ರಾಹಕರ ಆರ್ಥಿಕ ಪರಿಸ್ಥಿತಿ ಮತ್ತು ಅಗತ್ಯಗಳಂಥ ಸಂಬಂಧಿತ ವೈಯಕ್ತಿಕ ಪರಿಸ್ಥಿತಿಗಳನ್ನು ಪರಿಗಣಿಸಿ ಸೂಕ್ತವಾಗಿರುವ ಸಲಹೆಯನ್ನು ಸ್ವೀಕರಿಸುವ ಹಕ್ಕು. ಈ ಬಾಧ್ಯತೆ ಗ್ರಾಹಕರಿಗೆ ಸಲಹೆ ನೀಡುವ ವ್ಯಕ್ತಿಗಳಿಗೆ ಅನ್ವಯಿಸುತ್ತದೆ ಮತ್ತು ನಿಯಂತ್ರಕರು ಅಂತಹ ಸಲಹೆಯನ್ನು ಅಗತ್ಯವಾಗಿ ನೀಡಬೇಕಾದ ಆರ್ಥಿಕ ಉತ್ಪನ್ನಗಳು ಮತ್ತು ಸೇವೆಗಳ ವಿಭಾಗಗಳನ್ನು ಸೂಚಿಸಬಹುದು.

a. ಒಬ್ಬ ಸದಸ್ಯರು ಇವುಗಳನ್ನು ಮಾಡಬೇಕು-

i. ಒಬ್ಬ ಗ್ರಾಹಕರ ಸಂಬಂಧಿತ ವೈಯಕ್ತಿಕ ಪರಿಸ್ಥಿತಿಗಳ ಬಗ್ಗೆ ಸರಿಯಾದ ಮತ್ತು ಸೂಕ್ತ ಮಾಹಿತಿ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು; ಮತ್ತು

ii. ಗ್ರಾಹಕರ ಸೂಕ್ತವಾದ ವೈಯಕ್ತಿಕ ಪರಿಸ್ಥಿತಿಗಳನ್ನು ಪರಿಗಣಿಸಿದ ನಂತರ ನೀಡಿದ ಸಲಹೆ ಗ್ರಾಹಕರು ಸೂಕ್ತವಾಗಿದೆಯೆಂದು ಖಚಿತಪಡಿಸಿಕೊಳ್ಳುವುದು.

b. ಒಬ್ಬ ಗ್ರಾಹಕರಿಗೆ ಸಂಬಂಧಿಸಿದ ಸೂಕ್ತವಾದ ವೈಯಕ್ತಿಕ ಪರಿಸ್ಥಿತಿಗಳ ಬಗ್ಗೆ ಲಭ್ಯವಿರುವ ಮಾಹಿತಿ ಅಪೂರ್ಣವಾಗಿದೆ ಅಥವಾ ನಿಖರವಾಗಿಲ್ಲವೆಂದು ಸದಸ್ಯರಿಗೆ ಸಕಾರಣವಾಗಿ ಸ್ಪಷ್ಟವಾದಲ್ಲಿ, ಸದಸ್ಯರು ಅಪೂರ್ಣ ಮಾಹಿತಿ ಅಥವಾ ಅಸಮರ್ಪಕವಾದ ಮಾಹಿತಿಯ ಆಧಾರದ ಮೇಲೆ ಮುಂದುವರೆಯುವ ಪರಿಣಾಮಗಳ ಬಗ್ಗೆ ಗ್ರಾಹಕರಿಗೆ ಎಚ್ಚರಿಕೆ ನೀಡಬೇಕು.

c. ಒಬ್ಬ ಗ್ರಾಹಕರು ಸದಸ್ಯರ ಪ್ರಕಾರ ಗ್ರಾಹಕರಿಗೆ ಸೂಕ್ತವಲ್ಲದ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯನ್ನು ಪಡೆಯುವ ಉದ್ದೇಶ ಹೊಂದಿದ್ದಲ್ಲಿ ಸದಸ್ಯರು -

i. ಸ್ಪಷ್ಟವಾಗಿ ಲಿಖಿತ ರೂಪದಲ್ಲಿ ಅವರ ಸಲಹೆಯನ್ನು ಗ್ರಾಹಕರು ಅವರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ತಿಳಿಸಬೇಕು; ಮತ್ತು

ii. ಅಂಶ 29.A.a ಯನ್ನು ಪಾಲಿಸಿದ ಮೇಲೆ ಹಾಗೂ ಗ್ರಾಹಕರಿಂದ ಲಿಖಿತ ಸ್ವೀಕೃತಿ ಪಡೆದ ಮೇಲಷ್ಟೇ ಗ್ರಾಹಕರು ವಿನಂತಿಸಿದ ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯನ್ನು ನೀಡಬಹುದು.

30. ಹಿತಾಸಕ್ತಿಯ ಘರ್ಷಣೆಯನ್ನು ಪರಿಹರಿಸುವುದು

ಒಬ್ಬ ಗ್ರಾಹಕರ ಹಿತಾಸಕ್ತಿಗಳು ಮತ್ತು ಸದಸ್ಯರ ಹಿತಾಸಕ್ತಿಗಳ ನಡುವೆ ಯಾವುದೇ ಘರ್ಷಣೆಯಿದ್ದಲ್ಲಿ, ಗ್ರಾಹಕರ ಹಿತಾಸಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

a. ಒಬ್ಬ ಸದಸ್ಯರು ಇವುಗಳನ್ನು ಮಾಡಬೇಕು-

i. ಗ್ರಾಹಕರಿಗೆ ಸಲಹೆ ನೀಡಲು ಸದಸ್ಯರು ಸ್ವೀಕರಿಸಿದ ಅಥವಾ ಸ್ವೀಕರಿಸುವುದನ್ನು ನಿರೀಕ್ಷಿಸುವ ಯಾವುದೇ ಸಂಘರ್ಷದ ಸಂಭಾವನೆಯೂ ಸೇರಿದಂತೆ ಯಾವುದೇ ಹಿತಾಸಕ್ತಿ ಸಂಘರ್ಷದ ಬಗೆಗಿನ ಮಾಹಿತಿಯನ್ನು ಒಬ್ಬ ಗ್ರಾಹಕರಿಗೆ ಒದಗಿಸುವುದು; ಮತ್ತು

ii. ಒಬ್ಬ ಸದಸ್ಯರಿಗೆ ಇವುಗಳ ನಡುವಿನ ಸಂಘರ್ಷದ ಬಗ್ಗೆ ಗೊತ್ತಿದ್ದರೆ ಅಥವಾ ಗೊತ್ತಿರುವ ನಿರೀಕ್ಷೆಯಿದ್ದರೆ ಗ್ರಾಹಕರ ಹಿತಾಸಕ್ತಿಗಳಿಗೆ ಆದ್ಯತೆ ನೀಡುವುದು-

1. ತನ್ನ ಸ್ವಂತ ಹಿತಾಸಕ್ತಿಗಳು ಮತ್ತು ಗ್ರಾಹಕರ ಹಿತಾಸಕ್ತಿಗಳು; ಅಥವಾ

2. ಸದಸ್ಯ ಆರ್ಥಿಕ ಪ್ರತಿನಿಧಿಯಾಗಿದ್ದಾಗ ಸಂಬಂಧಪಟ್ಟ ಸದಸ್ಯರು ಮತ್ತು ಗ್ರಾಹಕರ ನಡುವಿನ ಹಿತಾಸಕ್ತಿಗಳು

b. ಅಂಶ 16a.i. ಅಡಿಯಲ್ಲಿನ ಮಾಹಿತಿಯನ್ನು ಗ್ರಾಹಕರಿಗೆ ಲಿಖಿತವಾಗಿ ಹಾಗೂ ಅವರು ಅರ್ಥ ಮಾಡಿಕೊಳ್ಳಬಹುದಾದ ರೀತಿಯಲ್ಲಿ ನೀಡಬೇಕು ಮತ್ತು ಗ್ರಾಹಕರಿಂದ ಮಾಹಿತಿಯನ್ನು ಪಡೆದ ಲಿಖಿತ ರಶೀದಿಯನ್ನು ಪಡೆಯಬೇಕು.

c. ಈ ವಿಭಾಗದಲ್ಲಿ "ಸಂಘರ್ಷಭರಿತ ಸಂಭಾವನೆ"ಯೆಂದರೆ ಸದಸ್ಯರು ಗ್ರಾಹಕರಲ್ಲದ ಒಬ್ಬ ವ್ಯಕ್ತಿಯಿಂದ ಈ ಸಂದರ್ಭದಲ್ಲಿ ಒಬ್ಬ ಗ್ರಾಹಕರಿಗೆ ನೀಡುವ ಸಲಹೆಯ ಮೇಲೆ ಪ್ರಭಾವ ಬೀರುತ್ತದೆಂದು ಸಕಾರಣವಾಗಿ ನಿರೀಕ್ಷಿಸಿ ನೀಡಲಾದ ವಿತ್ತೀಯ ಅಥವಾ ವಿತ್ತೀಯವಲ್ಲದ ಯಾವುದೇ ಪ್ರಯೋಜನವೆನ್ನುವ ಅರ್ಥ ನೀಡುತ್ತದೆ.

**ಸಂಬಂಧವನ್ನು ಕೊನೆಗೊಳಿಸುವುದು**

31. ಸದಸ್ಯರು ಲೋಪ, ಸಾವು, ರಾಜೀನಾಮೆ ಅಥವಾ ಉಚ್ಛಾಟನೆ ಅಥವಾ ಬೋರ್ಡಿನಿಂದ ಸರ್ಟಿಫಿಕೇಟಿನ ರದ್ದತಿ ಸೇರಿದಂತೆ ಯಾವುದೇ ಕಾರಣಗಳಿಗೆ ಸದಸ್ಯರು ಸರಕು ಎಕ್ಸ್‌ಚೇಂಜಿನ ಸದಸ್ಯನಾಗಿರುವುದು ಕೊನೆಯಾದರೆ ಸದಸ್ಯರು ಮತ್ತು ಗ್ರಾಹಕನ ನಡುವಿನ ಈ ಸಂಬಂಧವನ್ನು ಅಂತ್ಯಗೊಳ್ಳುತ್ತದೆ.

32. ಕನಿಷ್ಠ 1 ತಿಂಗಳ ನೋಟಿಸನ್ನು ನೀಡಿ ಸದಸ್ಯರು, ಅಧಿಕೃತ ವ್ಯಕ್ತಿ ಮತ್ತು ಗ್ರಾಹಕ ತಮ್ಮ ನಡುವಿನ ಸಂಬಂಧವನ್ನು ಇತರ ಪಕ್ಷಗಳಿಗೆ ಯಾವುದೇ ಕಾರಣಗಳನ್ನು ನೀಡದೇ ಅಂತ್ಯಗೊಳಿಸಬಹುದು. ಆದರೆ ಈ ಸಂಬಂಧವನ್ನು ಅಂತ್ಯಗೊಳಿಸುವ ಮುನ್ನ ಮಾಡಿದ ವ್ಯವಹಾರಗಳಿಂದ ಬರುವ ಎಲ್ಲ ಹಕ್ಕುಗಳು, ಬಾಧ್ಯತೆಗಳು ಮತ್ತು ಹೊಣೆಗಳು ಉಳಿದುಕೊಳ್ಳುತ್ತವೆ ಮತ್ತು ಆಯಾ ಪಕ್ಷಗಳನ್ನು ಅಥವಾ ಅವರ ವಾರಸುದಾರರು / ನಿರ್ವಾಹಕರು / ಆಡಳಿತಗಾರರು /ಕಾನೂನು ಸಮ್ಮತ ಪ್ರತಿನಿಧಿಗಳು ಅಥವಾ ಉತ್ತರಾಧಿಕಾರಿಗಳನ್ನು ಬಂಧಿಸುತ್ತವೆ.

33. ಒಂದ ವೇಳೆ ಅಧಿಕೃತ ವ್ಯಕ್ತಿ ಸತ್ತರೆ / ದಿವಾಳಿಯಾದರೆ ಅಥವಾ ಬೋರ್ಡಿನ ಜೊತೆಗಿನ ಅವನ / ಅದರ ರಿಜಿಸ್ಟ್ರೇಷನ್ ರದ್ದಾದರೆ ಅಥವಾ ಸರಕು ಎಕ್ಸ್‌ಚೇಂಜ್ ಅಧಿಕೃತ ವ್ಯಕ್ತಿಯ ಮಾನ್ಯತೆಯನ್ನು ಹಿಂದಕ್ಕೆ ಪಡೆದರೆ ಮತ್ತು/ ಅಥವಾ ಯಾವುದೇ ಕಾರಣದಿಂದಾಗಿ ಸದಸ್ಯರು ಸಬ್ ಬ್ರೋಕರ್ ಜೊತೆಗಿನ ಒಪ್ಪಂದವನ್ನು ಕೊನೆಗೊಳಿಸಿದರೆ, ಅಂತಹ ಅಂತ್ಯವನ್ನು ಗ್ರಾಹಕನಿಗೆ ತಿಳಿಸಬೇಕು ಮತ್ತು ಗ್ರಾಹಕನನ್ನು ನೇರ ಸ್ಟಾಕ್ ಬ್ರೋಕರ್‌ನ ಗ್ರಾಹಕನೆಂದು ಪರಿಗಣಿಸಲಾಗುತ್ತದೆ ಮತ್ತು ಗ್ರಾಹಕನು ಸದಸ್ಯರಿಗೆ ತಮ್ಮಿಬ್ಬರ ಸಂಬಂಧವನ್ನು ಕೊನೆಗೊಳಿಸುವ ಉದ್ದೇಶವನ್ನು ಕನಿಷ್ಠ 1 ತಿಂಗಳ ಲಿಖಿತ ಪೂರ್ವಭಾವಿ ನೋಟಿಸಿನ ಮೂಲಕ ತಿಳಿಸಿರದಿದ್ದರೆ ಸದಸ್ಯರು, ಅಧಿಕೃತ ವ್ಯಕ್ತಿ, ಮತ್ತು ಗ್ರಾಹಕನನ್ನು ಪಾಲಿಸುವ 'ಹಕ್ಕುಗಳು ಮತ್ತು ಬಾಧ್ಯತೆಗಳ' ಎಲ್ಲ ಕಲಮುಗಳೂ ಮುಂದುವರಿಯುತ್ತವೆ.

**ಹೆಚ್ಚುವರಿ ಹಕ್ಕುಗಳು ಮತ್ತು ಬಾಧ್ಯತೆಗಳು**

34. ಎಲ್ಲಿ ಟ್ರೇಡ್ ನಡೆದಿರುತ್ತದೋ ಆ SEBI ಮತ್ತು ಸಂಬಂಧಪಟ್ಟ ಎಕ್ಸ್‌ಚೇಂಜುಗಳು ನೀಡಿರುವ ನಿಯಮಾವಳಿಗಳು, ವ್ಯಾಪಾರ ನಿಯಮಗಳು, ಬೈಲಾಗಳು, ವಿವರಗಳು, ಗ್ರಾಹಕನ ಕೋಡ್, ಬ್ರೋಕರೇಜ್, ವಿಧಿಸಿದ ಎಲ್ಲ ಸುಂಕಗಳು, ಇತ್ಯಾದಿಗಳನ್ನು ಒಳಗೊಂಡಂತೆ ಎಲ್ಲ ವ್ಯವಹಾರಗಳ ದಾಖಲೆಗಳನ್ನು ಎಕ್ಸ್‌ಚೇಂಜ್ ತಿಳಿಸಿರುವ ರೀತಿಯಲ್ಲೇ ಭರ್ತಿ ಮಾಡಿ ನೀಡಬೇಕು. ಸದಸ್ಯರು ಈ ಕಾಂಟ್ರಾಕ್ಟ್ ನೋಟುಗಳನ್ನು ಟ್ರೇಡ್ ನಡೆದ ಒಂದು ಕೆಲಸದ ದಿನದ ಒಳಗಾಗಿ ಹಾರ್ಡ್ ಕಾಪಿಯಲ್ಲಿ ಮತ್ತು/ಅಥವಾ ಡಿಜಿಟಲ್ ಸಹಿ ಬಳಸಿ ಇಲೆಕ್ಟ್ರಾನಿಕ್ ನಮೂನೆಯಲ್ಲಿಕಳುಹಿಸಬೇಕು.

35. ನಡೆಸಿದ ಟ್ರೇಡ್‌ಗಳಿಗೆ ಸದಸ್ಯರು ತನ್ನ ಗ್ರಾಹಕರಿಗೆ ಒಂದು ಕಾಂಟ್ರಾಕ್ಟ್ ನೋಟ್ ಅನ್ನು ಎಕ್ಸ್ ಚೇಂಜ್ ಕಾಲ ಕಾಲಕ್ಕೆ ನಿಗದಿ ಪಡಿಸುವ ನಮೂನೆಯಲ್ಲಿ ನೀಡಬೇಕು. ಇದರಲ್ಲಿ ಆದೇಶದ ಸಂಖ್ಯೆ, ಟ್ರೇಡ್ ನಂಬರ್, ಟ್ರೇಡ್ ಸಮಯ, ಟ್ರೇಡ್ ಬೆಲೆ, ಟ್ರೇಡ್ ಪ್ರಮಾಣ, ಡೆರಿವೇಟೀವ್ಸ್ ಒಪ್ಪಂದದ ವಿವರಗಳು, ಗ್ರಾಹಕನ ಕೋಡ್, ಬ್ರೋಕರೇಜ್, ವಿಧಿಸಿದ ಎಲ್ಲ ಸುಂಕಗಳು, ಇತ್ಯಾದಿಗಳನ್ನು ಒಳಗೊಂಡಂತೆ ಎಲ್ಲ ವ್ಯವಹಾರಗಳ ದಾಖಲೆಗಳನ್ನು ಎಕ್ಸ್ ಚೇಂಜ್ ತಿಳಿಸಿರುವ ರೀತಿಯಲ್ಲೇ ಭರ್ತಿ ಮಾಡಿ ನೀಡಬೇಕು. ಸದಸ್ಯರು ಈ ಕಾಂಟ್ರಾಕ್ಟ್ ನೋಟುಗಳನ್ನು ಟ್ರೇಡ್ ನಡೆದ 24 ತಾಸುಗಳ ಒಳಗಾಗಿ ಹಾರ್ಡ್ ಕಾಪಿಯಲ್ಲಿ ಮತ್ತು/ಅಥವಾ ಡಿಜಿಟಲ್ ಸಹಿ ಬಳಸಿ ಇಲೆಕ್ಟ್ರಾನಿಕ್ ನಮೂನೆಯಲ್ಲಿ ಕಳುಹಿಸಬೇಕು.

36. ಸದಸ್ಯರು, ಗ್ರಾಹಕನು ಅನ್ಯಥಾ ಹೇಳಿರದಿದ್ದರೆ ಎಲ್ಲಿ ಟ್ರೇಡ್ ನಡೆದಿರುತ್ತದೋ ಆ ಸಂಬಂಧಪಟ್ಟ ಎಕ್ಸ್‌ಚೇಂಜ್‌ನಿಂದ 'ಪೇ ಔಟ್' ಅನ್ನು ಪಡೆದ ನಂತರ ಗ್ರಾಹಕನಿಗೆ ಸಂದರ್ಭಾನುಸಾರ ಹಣವನ್ನು 'ಪೇ ಔಟ್' ಮಾಡಬೇಕು ಅಥವಾ ಸರಕುಗಳು, ಬೈಲಾಗಳು, ವ್ಯಾಪಾರ ನಿಯಮಗಳು ಹಾಗೂ ಸುತ್ತೋಲೆಗಳು ಡೆಲಿವರಿ ಮಾಡಬೇಕು ಮತ್ತು; ಇದು, ಸಂಬಂಧಪಟ್ಟ ಎಕ್ಸ್‌ಚೇಂಜ್ ಕಾಲಕಾಲಕ್ಕೆ ನಿಗದಿಪಡಿಸುವ

ಕರಾರುಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

37. ಸದಸ್ಯರು ಪ್ರತಿಯೊಬ್ಬ ಗ್ರಾಹಕನಿಗೂ ನಿಧಿಗಳು ಹಾಗೂ ಸರಕುಗಳೆರಡಕ್ಕೂ ತನ್ನ ಪ್ರತಿಯೊಬ್ಬ ಗ್ರಾಹಕರಿಗೂ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಂಬಂಧಪಟ್ಟ ಎಕ್ಸ್ ಚೇಂಜ್ ಸೂಚಿಸಬಹುದಾದ ಆವರ್ತದಲ್ಲಿ ಅದು ಹೇಳಿದ ಸಮಯದಲ್ಲಿ ವ್ಯಾಪಾರ ಮಾಡಲ್ಪಟ್ಟಾಗ ಕಾಲಕಾಲಕ್ಕೆ ಒಂದು ಸಂಪೂರ್ಣವಾದ 'ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್' ಕಳುಹಿಸಬೇಕು. ಈ ಹೇಳಿಕೆಯಲ್ಲಿ, ಗ್ರಾಹಕನು ತಪ್ಪುಗಳೇನಾದರೂ ಇದ್ದರೆ ಸಂಬಂಧಪಟ್ಟ ಎಕ್ಸ್ ಚೇಂಜ್ ಸೂಚಿಸಬಹುದಾದ ಆವರ್ತದೊಳಗೆ ಸದಸ್ಯರಿಗೆ (ಸ್ಟಾಕ್ ಬ್ರೋಕರ್) ತಿಳಿಸಬೇಕು ಎಂದೂ ಹೇಳಿಕೆ ನೀಡಬೇಕು. ಎಲ್ಲ

38. ಸದಸ್ಯರು, ಗ್ರಾಹಕರಿಗೆ ಪ್ರತಿದಿನ ' ಮಾರ್ಜಿನ್' ಹೇಳಿಕೆಗಳನ್ನು ಕಳುಹಿಸಬೇಕು. ಬೇರೆ ವಿವರಗಳ ಜೊತೆಯಲ್ಲಿ ಮಾರ್ಜಿನ್ ಹೇಳಿಕೆಯು ಜಮಾ ಮಾಡಿದ , ಬಳಸಿಕೊಂಡ ಮೇಲಾಧಾರಗಳ ವಿವರಗಳು ಮತ್ತು ಮೇಲಾಧಾರಗಳ ಸ್ಥಿತಿಗತಿ (ಲಭ್ಯವಿರುವ ಶಿಲ್ಕು/ಗ್ರಾಹಕನಿಂದ ಬರಬೇಕಾದ ಬಾಕಿ) ಜೊತೆಗೆ ನಗದು, ನಿಶ್ಚಿತ ಠೇವಣಿ ರಸೀತಿಗಳು (FDR), ಬ್ಯಾಂಕ್ ಗ್ಯಾರಂಟಿ ಮತ್ತು ವೇರ್‌ಹೌಸ್ ರಸೀತಿಗಳು ಸೆಕ್ಯುರಿಟೀಸ್ ಎಂದ ವಿಭಾಗಿಸಿ ವಿವರಗಳನ್ನು ನೀಡಬೇಕು.

39. ಗ್ರಾಹಕನು, ಸದಸ್ಯರು ಜೊತೆಗೆ ಸಂಬಂಧ ಬೆಳೆಸಲು ತಾನು ಅಗತ್ಯವಾದ ಕಾನೂನು ಸಾಮರ್ಥ್ಯವನ್ನು, ಅಧಿಕಾರವನ್ನು ಹೊಂದಿರುವುದಾಗಿ ಮತ್ತು ಅದರ ಅಡಿಯಲ್ಲಿ ಬರುವ ಹೊಣೆ ಮತ್ತು ಬಾಧ್ಯತೆಗಳನ್ನು ನೆರವೇರಿಸುವ ಸಾಮರ್ಥ್ಯವನ್ನು ಹೊಂದಿರುವುದಾಗಿ ಖಾತ್ರಿಪಡಿಸಬೇಕು. ಈ ವ್ಯವಹಾರಗಳನ್ನು ಪ್ರಾರಂಭಿಸುವ ಮುನ್ನ ಎಲ್ಲ ವ್ಯವಹಾರಗಳನ್ನು ಪೂರೈಸಲು ಅಗತ್ಯವಾದ ಎಲ್ಲ ಕಾರ್ಯಗಳನ್ನು ಮಾಡಿ ಮುಗಿಸಲಾಗಿದೆ ಎಂದು ಗ್ರಾಹಕನು ಖಾತ್ರಿಪಡಿಸಬೇಕು.

40. ಒಬ್ಬ ಸದಸ್ಯರು ತನ್ನ ಸದಸ್ಯತ್ವವನ್ನು ನಿಲ್ಲಿಸಿದಲ್ಲಿ, ಸದಸ್ಯರು ಹೂಡಿಕೆದಾರರಿಂದ (ಇನ್ವೆಸ್ಟರ್) ಯಾವುದಾದರೂ ಹಕ್ಕುಸಾಧನೆಗಳಿದ್ದಲ್ಲಿ ಅವುಗಳಿಗಾಗಿ ಆಹ್ವಾನಿಸಿ ಸಾರ್ವಜನಿಕ ಸೂಚನೆ ನೀಡುತ್ತಾರೆ. ಎಕ್ಸ್ ಚೇಂಜ್‌ನ ವ್ಯಾಪಾರ ವ್ಯವಸ್ಥೆಯಲ್ಲಿ ಕಾರ್ಯಗತಗೊಂಡ ವಹಿವಾಟುಗಳಿಗೆ ಸಂಭಂಧಿಸಿದ ಹಕ್ಕುಸಾಧನೆಗಳಿದ್ದಲ್ಲಿ ಗ್ರಾಹಕರು ನಿಗದಿತ ಅವಧಿಯೊಳಗೆ ಎಕ್ಸ್ ಚೇಂಜ್‌ನಲ್ಲಿ ಹಕ್ಕುಸಾಧನೆಗಳನ್ನು ಸಲ್ಲಿಸುತ್ತಾರೆ ಮತ್ತು ಬೆಂಬಲ ದಾಖಲೆಗಳನ್ನು ನೀಡುತ್ತಾರೆಂದು ಖಚಿತಪಡಿಸಿಕೊಳ್ಳಿ.

41. A. ಅನ್ಯಾಯಯುತ ನಡವಳಿಕೆ ಹಾಗೂ ನಿಂದನಾ ನೀತಿಗಳನ್ನು ಒಳಗೊಂಡ ಅನ್ಯಾಯದ ನಡವಳಿಕೆಯಿಂದ ರಕ್ಷಣೆ

a. ಆರ್ಥಿಕ ಉತ್ಪನ್ನಗಳು ಅಥವಾ ಆರ್ಥಿಕ ಸೇವೆಗಳಿಗೆ ಸಂಬಂಧಿಸಿದ ಅನ್ಯಾಯಯುತ ನಡವಳಿಕೆಯನ್ನು ನಿಷೇಧಿಸಲಾಗಿದೆ.

b. "ನ್ಯಾಯಸಮ್ಮತವಲ್ಲದ ನಡವಳಿಕೆ" ಎಂದರೆ ಒಬ್ಬ ಸದಸ್ಯರು ಅಥವಾ ಅವರ ಹಣಕಾಸು ಪ್ರತಿನಿಧಿಯಿಂದ ಉಂಟಾಗುವ ಅಥವಾ ಉಂಟಾಗದಿರುವ ಒಂದು ನಡವಳಿಕೆಯಾಗಿದ್ದು ಇದು ಮಾಹಿತಿಪೂರ್ಣ ವ್ಯವಹಾರದ ನಿರ್ಧಾರ ಕೈಗೊಳ್ಳುವ ಗ್ರಾಹಕರ ಸಾಮರ್ಥ್ಯವನ್ನು ಗಮನಾರ್ಹವಾಗಿ ಕುಗ್ಗಿಸುತ್ತದೆ, ಅಥವಾ ಗಮನಾರ್ಹವಾಗಿ ಕುಗ್ಗಿಸುವ ಸಾಧ್ಯತೆಯಿರುತ್ತದೆ ಮತ್ತು ಅದು ಇವುಗಳನ್ನು ಒಳಗೊಂಡಿದೆ -

i. ಅಂಶ 41.B ಅಡಿಯಲ್ಲಿ ತಪ್ಪು ನಡವಳಿಕೆ

ii. ಅಂಶ 41.C ಅಡಿಯಲ್ಲಿ ನಿಂದನಾತ್ಮಕ ನಡವಳಿಕೆ

iii. ನಿರ್ದಿಷ್ಟಪಡಿಸಬಹುದಾದ ಇಂತಹ ಇತರ ನಡವಳಿಕೆ.

41. B.

a. ಗ್ರಾಹಕರು ಒಂದು ನಿರ್ಧಾರವನ್ನು ಸಾಮಾನ್ಯವಾಗಿ ತೆಗೆದುಕೊಳ್ಳದಿರುತ್ತಿದ್ದರೂ ಅವರು ಬೇರೆ ರೀತಿಯ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡುವ ಅಂಶಕ್ಕೆ ಸಂಬಂಧಿಸಿದಂತೆ ಒಬ್ಬ ಸದಸ್ಯರು ಅಥವಾ ಅವರ ಹಣಕಾಸು ಪ್ರತಿನಿಧಿಯ ನಡವಳಿಕೆ-

i. ಗ್ರಾಹಕರಿಗೆ ಅಸಮರ್ಪಕ ಮಾಹಿತಿ ನೀಡುವುದು ಅಥವಾ ಸದಸ್ಯರು ಅಥವಾ ಆರ್ಥಿಕ ಪ್ರತಿನಿಧಿಯು ನಿಜವೆಂದು ನಂಬದ ಮಾಹಿತಿಯನ್ನು ನೀಡುವುದು; ಅಥವಾ

ii. ಮೋಸಗೊಳಿಸುವ ರೀತಿಯಲ್ಲಿ ಗ್ರಾಹಕರಿಗೆ ನಿಖರವಾದ ಮಾಹಿತಿಯನ್ನು ನೀಡುವುದು.

b. ಅಂಶ 41.B.a, ಅಡಿಯಲ್ಲಿ ಒಂದು ನೀತಿ ತಪ್ಪೇ ಎಂಬುದನ್ನು ನಿರ್ಧರಿಸಲು ಈ ಕೆಳಗಿನ ಅಂಶಗಳನ್ನು "ನಿರ್ಣಾಯಕ ಅಂಶಗಳೆಂದು" ಪರಿಗಣಿಸಬೇಕು -

i. ಒಂದು ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಯ ಪ್ರಮುಖ ವೈಶಿಷ್ಟ್ಯಗಳು, ಅದರ ಪ್ರಯೋಜನಗಳು ಮತ್ತು ಗ್ರಾಹಕರಿಗಿರುವ ಅಪಾಯಗಳೂ ಸೇರಿದಂತೆ;

ii. ನಿರ್ದಿಷ್ಟ ಹಣಕಾಸಿನ ಉತ್ಪನ್ನ ಅಥವಾ ಹಣಕಾಸು ಸೇವೆಯ ಗ್ರಾಹಕರ ಅಗತ್ಯ ಅಥವಾ ಗ್ರಾಹಕರಿಗೆ ಅದರ ಸೂಕ್ತತೆ;

iii. ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ನೀಡಬೇಕಾದ ಪರಿಗಣನೆ ಅಥವಾ ಪರಿಗಣನೆಯನ್ನು ನೀಡಬೇಕಾದ ವಿಧಾನ;

iv. ಆ ಆರ್ಥಿಕ ಒಪ್ಪಂದಕ್ಕೆ ಸಂಬಂಧಿಸಿದಂತೆ ವಸ್ತು ನಿಯಮವಾಗಿರುವ ಯಾವುದೇ ನಿಯಮದ ಅಸ್ತಿತ್ವ, ಹೊರಗಿಡುವಿಕೆ ಅಥವಾ ಪರಿಣಾಮ;

v. ಗುರುತು, ನಿಯಂತ್ರಕ ಸ್ಥಿತಿ ಮತ್ತು ಸದಸ್ಯತ್ವವೂ ಸೇರಿದಂತೆ ಸದಸ್ಯರ ಸ್ವರೂಪ, ಲಕ್ಷಣಗಳು ಮತ್ತು ಹಕ್ಕುಗಳು; ಹಾಗೂ

vi. ಯಾವುದೇ ಕಾನೂನು ಅಥವಾ ನಿಯಮಗಳಡಿಯಲ್ಲಿ ಗ್ರಾಹಕರ ಹಕ್ಕುಗಳು.

41. C.

a. ಒಂದು ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ಸಂಬಂಧಿಸಿದಂತೆ ಒಬ್ಬ ಸದಸ್ಯರು ಅಥವಾ ಅವರ ಹಣಕಾಸು ಪ್ರತಿನಿಧಿಯ ವರ್ತನೆ ಹೀಗಿದ್ದಲ್ಲಿ ನಿಂದನಾತ್ಮಕವಾಗಿದೆ -

  i. ದಬ್ಬಾಳಿಕೆ ಅಥವಾ ಅನುಚಿತ ಪ್ರಭಾವದ ಬಳಕೆಯನ್ನು ಒಳಗೊಂಡಿದೆ; ಮತ್ತು

  ii. ಗ್ರಾಹಕರು ಅನ್ಯಥಾ ತೆಗೆದುಕೊಳ್ಳದಿದ್ದ ವ್ಯವಹಾರದ ನಿರ್ಧಾರವನ್ನು ಗ್ರಾಹಕರು ತೆಗೆದುಕೊಳ್ಳಲು ಕಾರಣವಾಗುತ್ತದೆ

b. ಒಂದು ನಡವಳಿಕೆಯು ದಬ್ಬಾಳಿಕೆಯ ಅಥವಾ ಅನುಚಿತ ಪ್ರಭಾವವನ್ನು ಬಳಸುತ್ತದೆಯೇ ಎಂಬುದನ್ನು ನಿರ್ಣಯಿಸಲು ಕೆಳಗಿನವುಗಳನ್ನು ಪರಿಗಣಿಸಬೇಕು -

  i. ನಡವಳಿಕೆಯ ಸಮಯ, ಸ್ಥಳ, ಸ್ವರೂಪ ಅಥವಾ ನಿರಂತರತೆ;

  ii. ಬೆದರಿಕೆ ಅಥವಾ ನಿಂದನೆಯ ಭಾಷೆ ಅಥವಾ ನಡತೆಯ ಬಳಕೆ;

  iii. ಆರ್ಥಿಕ ಉತ್ಪನ್ನ ಅಥವಾ ಹಣಕಾಸು ಸೇವೆಗೆ ಸಂಬಂಧಿಸಿದಂತೆ ಗ್ರಾಹಕರ ನಿರ್ಧಾರದ ಮೇಲೆ ಪ್ರಭಾವ ಬೀರಲು ಸದಸ್ಯರಿಗೆ ತಿಳಿದಿರುವ ಗ್ರಾಹಕರ ಯಾವುದೇ ನಿರ್ದಿಷ್ಟ ದುರದೃಷ್ಟ ಅಥವಾ ಪರಿಸ್ಥಿತಿಯ ಶೋಷಣೆ;

  iv. ಆರ್ಥಿಕ ಒಪ್ಪಂದದ ಹಕ್ಕುಗಳಡಿಯಲ್ಲಿ ಗ್ರಾಹಕರು ಜಾರಿಗೊಳಿಸಬಯಸುವ ಸದಸ್ಯರು ಹೇರಿದ ಯಾವುದೇ ಕರಾರಿನದ್ದಲ್ಲದ ಅಡೆತಡೆಗಳು, ಅವುಗಳು ಇವುಗಳನ್ನು ಒಳಗೊಂಡಿರುತ್ತವೆ-

  v. ಆರ್ಥಿಕ ಒಪ್ಪಂದವನ್ನು ರದ್ದುಗೊಳಿಸುವ ಹಕ್ಕು;

  vi. ಮತ್ತೊಂದು ಆರ್ಥಿಕ ಉತ್ಪನ್ನ ಅಥವಾ ಮತ್ತೊಬ್ಬ ಸದಸ್ಯರಿಗೆ ಬದಲಾಗುವ ಹಕ್ಕು ಮತ್ತು

  vii. ಬೆದರಿಕೆಯನ್ನು ಮಾಡಿದ ಸಂದರ್ಭಗಳನ್ನು ಅವಲಂಬಿಸಿ ಯಾವುದೇ ಕೆಲಸವನ್ನು ಮಾಡುವ ಬೆದರಿಕೆ.

**ಇಲೆಕ್ಟ್ರಾನಿಕ್ ಕಾಂಟ್ರ್ಯಾಕ್ಟ್ ನೋಟ್ಸ್ (ECN)**

42. ಒಂದು ವೇಳೆ ಗ್ರಾಹಕನು ಕಾಂಟ್ರ್ಯಾಕ್ಟ್ ನೋಟನ್ನು ಇಲೆಕ್ಟ್ರಾನಿಕ್ ಫಾರಂನಲ್ಲಿ ಸ್ವೀಕರಿಸುವ ಆಯ್ಕೆ ಮಾಡಿದ್ದರೆ, ಅವನು ಸದಸ್ಯರಿಗೆ ಸರಿಯಾದ ಇ-ಮೇಲ್ ಐಡಿಯನ್ನು (ಗ್ರಾಹಕರು ಸೃಷ್ಟಿಸಿದ್ದು) ಗ್ರಾಹಕರಿಗೆ (ಅನುಬಂಧ 3ರ ಪರಿಶಿಷ್ಟ Aಯನ್ನು ನೋಡಿ). ಸದಸ್ಯರು ಈ ನಿಟ್ಟಿನಲ್ಲಿ ಹೊರಡಿಸಿದ ಎಲ್ಲ ನಿಯಮಗಳು/ವ್ಯಾಪಾರ ನಿಯಮಗಳು/ಬೈಲಾಗಳು/ಸುತ್ತೋಲೆಗಳನ್ನು ಅನುಸರಿಸಲಾಗಿದೆಯೆಂದು ಖಚಿತಪಡಿಸಿಕೊಳ್ಳಬೇಕು. ಹಾರ್ಡ್ ಕಾಪಿಯಲ್ಲೇ ನೀಡಬೇಕು. ಗ್ರಾಹಕನು ಇಂಟರ್‌ನೆಟ್ ಟ್ರೇಡಿಂಗ್ ಆಯ್ಕೆಮಾಡಿದ್ದರೆ ಇಮೇಲ್ ಐಡಿ

ಬದಲಾವಣೆಯನ್ನು ಗ್ರಾಹಕನ ನಿರ್ದಿಷ್ಟ 'ಯೂಸರ್ ಐಡಿ' ಮತ್ತು ಪಾಸ್‌ವರ್ಡ್‌ಬಳಸಿ ಸುಭದ್ರ ವ್ಯವಸ್ಥೆಯಲ್ಲಿ ಕೋರಬೇಕಾಗುತ್ತದೆ.

43. ಇಮೇಲ್ ಮೂಲಕ ಕಳುಹಿಸಿದ ಎಲ್ಲ ECNಗಳಿಗೆ ಡಿಜಿಟಲ್ ಸಹಿ, ಎನ್‌ಕ್ರಿಪ್ಟೆಡ್ ಇದ್ದು ಅದನ್ನು ಯಾರೂ ಅಕ್ರಮವಾಗಿ ತಿದ್ದಲು ಆಗಬಾರದು ಮತ್ತು ಐಟಿ ಕಾಯಿದೆ, 2000, ಉಪಬಂಧಗಳ ಅನುಸಾರ ಇರಬೇಕು. ಅಕಸ್ಮಾತ್ ಸದಸ್ಯರು ಗ್ರಾಹಕನ ECN ಇಮೇಲ್ ಐಡಿಗೆ ಕಳುಹಿಸಿದ 'ಕಾಂಟ್ರ್ಯಾಕ್ಟ್ ನೋಟ್' ಮೇಲ್ ಬೌನ್ಸ್ ಆದರೆ ಅದನ್ನು ಡೆಲಿವರಿ ಆಗಿದೆಯೆಂದು ಪರಿಗಣಿಸಲಾಗುವುದು.

44. ಸದಸ್ಯರಿಂದ ಬೌನ್ಸ್ ಆದ ಮೇಲ್ ಅನ್ನು ಪಡೆಯದಿರುವುದು ಗ್ರಾಹಕರ ಇಮೇಲ್ IDಯಲ್ಲಿ ಕಾಂಟ್ರಾಕ್ಟ್ ನೋಟ್‌ನ ವಿತರಣೆಯಾಗಿರುವುದಕ್ಕೆ ಸಮನಾಗಿರುತ್ತದೆ ಎನ್ನುವುದನ್ನು ಗ್ರಾಹಕರು ಗಮನಿಸಬೇಕು.

45. ಸದಸ್ಯರು ಕಳುಹಿಸಿದ ಇಮೇಲ್‌ನ ECN ಮತ್ತು ಸ್ವೀಕೃತ ಪಾವತಿ ಯನ್ನು IT ಕಾಯಿದೆ, 2000 ಉಪಬಂಧಗಳ ಪ್ರಕಾರ ಎಕ್ಸ್‌ಚೇಂಜ್ ನಿಗದಿ ಪಡಿಸುವಂತೆ ಮತ್ತು SEBI/ಸರಕು ಎಕ್ಸ್‌ಚೇಂಜುಗಳು ಕಾಲಕಾಲಕ್ಕೆ ನೀಡುವ ಚಾಲ್ತಿಯಲ್ಲಿರುವ ನಿಯಮಾವಳಿಗಳು/ವ್ಯಾಪಾರ ನಿಯಮಗಳು/ ಸುತ್ತೋಲೆಗಳು/ SEBI ಮಾರ್ಗದರ್ಶಕಗಳ ಒಂದು ಸಾಫ್ಟ್ ಹಾಗೂ ಅಕ್ರಮವಾಗಿ ತಿದ್ದಲು ಸಾಧ್ಯವಿಲ್ಲದ ನಮೂನೆಯಲ್ಲಿ ಉಳಿಸಿಕೊಂಡಿರಬೇಕು. ಡೆಲಿವರಿ ರುಜುವಾತಾಗಿ ಸಿಸ್ಟಂ ಉತ್ಪತ್ತಿ ಮಾಡುವ ಲಾಗ್ ರಿಪೋರ್ಟ್ ಅನ್ನು ಸದಸ್ಯರು SEBI/ಸರಕು ಎಕ್ಸ್ ಚೇಂಜುಗಳು ಕಾಲಕಾಲಕ್ಕೆ ನಿಗದಿಪಡಿಸುವ ಅವಧಿಗೆ ಕಾಪಾಡಿಕೊಳ್ಳಬೇಕು. ಗ್ರಾಹಕನಿಗೆ ಡೆಲಿವರಿ ಆಗದಿದ್ದರೂ/ ಇಮೇಲುಗಳು ತಿರಸ್ಕೃತ ಅಥವಾ ಬೌನ್ಸ್ ಆಗಿದ್ದರೂ ಲಾಗ್ ರಿಪೋರ್ಟಿನಲ್ಲಿ ಕಾಂಟ್ರ್ಯಾಕ್ಟ್ ನೋಟುಗಳ ವಿವರಗಳು ದೊರೆಯುತ್ತವೆ.

46. ಕಾಂಟ್ರ್ಯಾಕ್ಟ್ ನೋಟುಗಳನ್ನು ಇಲೆಕ್ಟ್ರಾನಿಕ್ ಮಾದರಿಯಲ್ಲಿ ಪಡೆಯುವ ಆಯ್ಕೆ ಮಾಡದಿದ್ದ ಗ್ರಾಹಕರಿಗೆ ಸದಸ್ಯರು ಭೌತಿಕ ರೂಪದಲ್ಲಿ ಕಳುಹಿಸಬೇಕು. ಎಲ್ಲೆಲ್ಲಿ ECNಗಳನ್ನು ಗ್ರಾಹಕನಿಗೆ ಡೆಲಿವರಿ ಮಾಡಿಲ್ಲ/ಇಮೇಲು IDಗಳು ತಿರಸ್ಕೃತ ಅಥವಾ ಬೌನ್ಸ್ ಆಗಿವೆಯೋ ಅಲ್ಲೆಲ್ಲ ಸದಸ್ಯರು SEBI/ಸರಕು ಎಕ್ಸ್ ಚೇಂಜುಗಳು ಕಾಲಕಾಲಕ್ಕೆ ನೀಡುವ ಚಾಲ್ತಿಯಲ್ಲಿರುವ ನಿಯಮಾವಳಿಗಳು ನಿಗದಿಪಡಿಸುವ ಸಮಯದ ಒಳಗೆ ಭೌತಿಕ ರೂಪದಲ್ಲಿ ಕಾಂಟ್ರ್ಯಾಕ್ಟ್ ನೋಟುಗಳನ್ನು ಕಳುಹಿಸಬೇಕು ಮತ್ತು ಅವುಗಳ ಕಳಿಸುವಿಕೆ ಡೆಲಿವರಿ ಬಗ್ಗೆ ರುಜುವಾತನ್ನು ಇರಿಸಿಕೊಳ್ಳಬೇಕು.

47. ಗ್ರಾಹಕನಿಗೆ ECNಗಳನ್ನು ಕಳುಹಿಸುವುದ ರ ಜೊತೆಗೆ ಸದಸ್ಯರು ECNಗಳನ್ನು ತನ್ನ ನಿಗದಿ ತ ವೆಬ್-ಸೈಟಿನಲ್ಲಿ ಸುಭದ್ರವಾದ ರೀತಿಯಲ್ಲಿ ಪ್ರಕಟಿಸಬೇಕು. ಈ ಉದ್ದೇಶಕ್ಕಾಗಿ ಅವನು ಗ್ರಾಹಕನಿಗೆ ಒಂದ ವಿಶಿಷ್ಟ 'ಯೂಸರ್ ಹೆಸರು' ಮತ್ತುಪಾಸ್‌ವರ್ಡನ್ನು ನೀಡಬೇಕು ಜೊತೆಗೆ ಕಾಂಟ್ರ್ಯಾಕ್ಟ್ ನೋಟನ್ನು ಇಲೆಕ್ಟ್ರಾನಿಕ್ ರೂಪದಲ್ಲಿ ಮತ್ತು/ಅಥವಾ ಪ್ರಿಂಟ್ ತೆಗೆದುಕೊಂಡು ಭೌತಿಕ ರೂಪದಲ್ಲಿ ಕಾಪಾಡಿಟ್ಟಿಕೊಳ್ಳುವ ಆಯ್ಕೆಯನ್ನು ಗ್ರಾಹಕನಿಗೆ ಕೊಡಬೇಕು.

48. ಕಾಂಟ್ರಾಕ್ಟ್ ನೋಟ್ ಅನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಪಡೆಯಬಯಸುವ ಗ್ರಾಹಕರಿಂದ ಪಡೆದ ಎಲೆಕ್ಟ್ರಾನಿಕ್ ಕಾಂಟ್ರಾಕ್ಟ್ ನೋಟ್ (ECN) ಘೋಷಣಾ ಪತ್ರ. ಗ್ರಾಹಕರು ಹಿಂತೆಗೆದುಕೊಳ್ಳುವವರೆಗೂ ಈ ಘೋಷಣೆ ಮಾನ್ಯವಾಗಿರುತ್ತದೆ.

**ಕಾನೂನು ಮತ್ತು ವ್ಯಾಪ್ತಿ**

49. ಈ ಕಾಗದಪತ್ರದಲ್ಲಿ ಹೇಳಿರುವ ನಿರ್ದಿಷ್ಟ ಹಕ್ಕುಗಳ ಜೊತೆಯಲ್ಲಿ ಸದಸ್ಯರು, ಅಧಿಕೃತ ವ್ಯಕ್ತಿ ಮತ್ತು ಗ್ರಾಹಕ, ಯಾವ ಎಕ್ಸ್‌ಚೇಂಜಿನಲ್ಲಿ ಟ್ರೇಡ್ ಮಾಡಲು ಗ್ರಾಹಕ ಆಯ್ಕೆ ಮಾಡಿದ್ದಾನೋ ಆ ಎಕ್ಸ್‌ಚೇಂಜಿನ ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತುಅವುಗಳ ಅಡಿಯಲ್ಲಿ ನೀಡಿದ ಸುತ್ತೋಲೆಗಳು/ನೋಟಿಸುಗಳ ಅಥವಾ SEBI ನಿಯಮಾವಳಿಗಳು ಮತ್ತು ನಿಬಂಧನೆಗಳ ಅಡಿಯಲ್ಲಿ ಇರುವ ಯಾವುದೇ ಹಕ್ಕುಗಳನ್ನು ಚಲಾಯಿಸುವ ಅಧಿಕಾರವನ್ನುಹೊಂದಿರುತ್ತಾರೆ.

50. ಈ ಕಾಗದ ಪತ್ರದ ಉಪಬಂಧಗಳು ಕಾಲ ಕಾಲಕ್ಕೆ ಜಾರಿಯಲ್ಲಿರುವ ಯಾವತ್ತೂ ಸರ್ಕಾರಿ ಅಧಿ ಸೂಚನೆಗಳು, SEBI ನೀಡುವ ಯಾವುದೇ ನಿಯಮಾವಳಿಗಳು, , ಮಾರ್ಗದರ್ಶಕಗಳು ಮತ್ತು ಸುತ್ತೋಲೆಗಳು/ನೋಟಿಸುಗಳಿಗೆ ಮತ್ತುಎಲ್ಲಿ ಟ್ರೇಡ್ ನಡೆಯುತ್ತದೋ ಆ ಸ್ಟಾಕ್ ಎಕ್ಸ್ ಚೇಂಜಿನ ನಿಯಮಾವಳಿಗಳು,ವ್ಯಾಪಾರ ನಿಯಮಗಳು, ಮತ್ತುಬೈಲಾಗಳಿಗೆ ಒಳಪಟ್ಟಿರುತ್ತವೆ.

51. ಸದಸ್ಯರು ಮತ್ತು ಗ್ರಾಹಕ ಮಧ್ಯಸ್ಥಿಕೆ ಮತ್ತು ಸಮನ್ವಯ ಕಾಯಿದೆ 1996 ರ ಅಡಿಯಲ್ಲಿ ಜಾರಿಮಾಡಿದ ಯಾವುದೇ ಮಧ್ಯಸ್ಥಿಕೆ ತೀರ್ಪಿಗೆ ಬದ್ಧರಾಗಿರುತ್ತಾರೆ. ಆದರೆ ಈ ತೀರ್ಪಿನ ಬಗ್ಗೆ ಯಾವುದೇ ಪಕ್ಷಕ್ಕೆ ಅಸಮಾಧನವಿದ್ದರೆ ಸರಕು ಎಕ್ಸ್‌ಚೇಂಜುಗಳ ಒಳಗೇ ಅಪೀಲಿಗೆ ಒಂದು ಅವಕಾಶವಿದೆ.

52. ಈ ಕಾಗದ ಪತ್ರದಲ್ಲಿ ಬಳಸಿರುವ ಆದರೆ ನಿರ್ದಿಷ್ಟವಾಗಿ ವಿವರಿಸಿರದ ಪದಗಳು ಮತ್ತು ಅಭಿಪ್ರಾಯಗಳಿಗೆ, ಸಂದರ್ಭವು ಅನ್ಯಥಾ ಕೋರದಿದ್ದರೆ, ಎಕ್ಸ್‌ಚೇಂಜುಗಳು/SEBI ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಸುತ್ತೋಲೆಗಳು/ನೋಟಿಸುಗಳಲ್ಲಿ ನಿಯೋಜಿಸಿರುವ ಅರ್ಥವನ್ನೇ ಹೊಂದಿರುತ್ತವೆ.

53. ಸದಸ್ಯರು ಸೇರಿಸಿರಬಹುದಾದ ಎಲ್ಲ ಹೆಚ್ಚುವರಿ ಸ್ವಯಂಪ್ರೇರಿತ ಕಲಮುಗಳು/ಕಾಗದ ಪತ್ರಗಳು ಎಕ್ಸ್‌ಚೇಂಜುಗಳು/SEBI ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಸುತ್ತೋಲೆಗಳು/ನೋಟಿಸುಗಳನ್ನು ಉಲ್ಲಂಘಿಸುವಂತಿರಬಾರದು. ಅಂತಹ ಸ್ವಯಂಪ್ರೇರಿತ ಕಲಮು/ಕಾಗದ ಪತ್ರಗಳಿಗೆ 15 ದಿನಗಳ ಪೂರ್ವಭಾವಿ ನೋಟಿಸನ್ನು ನೀಡಬೇಕು. ಎಕ್ಸ್‌ಚೇಂಜುಗಳು/ SEBI ನಿಗದಿ ಪಡಿಸಿರುವ ಹಕ್ಕುಗಳು ಮತ್ತು ಬಾಧ್ಯತೆಗಳಲ್ಲಿ ಏನಾದರೂ ಬದಲಾವಣೆ ಮಾಡುವುದಿದ್ದರೆ ಅದನ್ನು ಗ್ರಾಹಕರ ಗಮನಕ್ಕೆ ತರಬೇಕು.

54. SEBI ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಸುತ್ತೋಲೆಗಳು/ನೋಟಿಸುಗಳ ಅಥವಾ ಸದರಿ ಟ್ರೇಡಿಗೆ ಸಂಬಂಧಪಟ್ಟ ಎಕ್ಸ್‌ಚೇಂಜಿನ ನಿಯಮಾವಳಿಗಳು, ಬೈಲಾಗಳು ಮತ್ತು ವ್ಯಾಪಾರ ನಿಯಮಗಳು ಮತ್ತು ಸುತ್ತೋಲೆಗಳು/ನೋಟಿಸುಗಳ ಪ್ರಕಾರ ಸಂಬಂಧಪಟ್ಟ ಪಕ್ಷಗಳ ಹಕ್ಕುಗಳು ಮತ್ತು ಬಾಧ್ಯತೆಗಳಲ್ಲಿ ಏನಾದರೂ ವ್ಯತ್ಯಯವಾದರೆ ಈ ಕಾಗದ ಪತ್ರಗಳಲ್ಲಿರುವ ಹಕ್ಕುಗಳು ಮತ್ತು ಬಾಧ್ಯತೆಗಳ ಬಗ್ಗೆ ಬದಲಾದವುಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಭಾವಿಸಲಾಗುತ್ತದೆ.

55. ಸದಸ್ಯರು ಪ್ರತಿ ತಿಂಗಳೂ ಅವರ ಗ್ರಾಹಕರಿಗೆ ಖಾತೆಯ ಹೇಳಿಕೆಯನ್ನು ಕಳಿಸಬೇಕು.

## ಸದಸ್ಯರುಗಳು ಗ್ರಾಹಕನಿಗೆ ಒದಗಿಸುವ ಇಂಟರ್‌ನೆಟ್ ಮತ್ತು ವೈರ್‌ಲೆಸ್ ತಂತ್ರಜ್ಞಾನ ಆಧಾರಿತ ಟ್ರೇಡಿಂಗ್ ಸೌಲಭ್ಯ

*(ಹಕ್ಕುಗಳು ಮತ್ತು ಬಾಧ್ಯತೆಗಳು* **ಪತ್ರದಲ್ಲಿ ಹೇಳಿರುವ ಎಲ್ಲ ಕಲಮುಗಳೂ ಅನ್ವಯವಾಗುತ್ತವೆ. ಜೊತೆಗೆ ಇಲ್ಲಿ ಹೇಳುವ ಕಲಮುಗಳೂ ಅನ್ವಯವಾಗುತ್ತವೆ).**

1. ಸದಸ್ಯರು ಇಂಟರ್‌ನೆಟ್ ಆಧಾರಿತ ಟ್ರೇಡಿಂಗ್ (IBT) ಮತ್ತು ಸರಕುಗಳು ಟ್ರೇಡಿಂಗ್ ಮಾಡಲು ವೈರ್‌ಲೆಸ್ ತಂತ್ರಜ್ಞಾನ ಒದಗಿಸಲು ಅರ್ಹನಾಗಿದ್ದು ಇದರಲ್ಲಿ ಬಳಸುವ ಇಂಟರ್‌ನೆಟ್ ಪ್ರೋಟೋಕೊಲೊ (IP) ಡಿವೈಸ್‌ಗಳಾದಂತಹ ಮೊಬೈಲ್ ಫೋನ್, ಡೇಟ ಕಾರ್ಡ್ ಸಹಿತ ಲ್ಯಾಪ್‌ಟಾಪ್, ಇತ್ಯಾದಿ ಸಾಧನಗಳೂ ಸೇರುತ್ತವೆ. ಈ ಬಗ್ಗೆ SEBI ಮತ್ತು ಎಕ್ಸ್‌ಚೇಂಜುಗಳು ಕಾಲ ಕಾಲಕ್ಕೆ ನಿರ್ದಿಷ್ಟವಾಗಿ ತಿಳಿಸುವ ವಯರ್‌ಲೆಸ್ ತಂತ್ರಜ್ಞಾನವನ್ನು ಬಳಸಿದ ಇಂಟರ್‌ನೆಟ್ ಆಧಾರಿತ ಟ್ರೇಡಿಂಗ್/ ಸರಕು ಟ್ರೇಡಿಂಗ್‌ಗೆ ಅನ್ವಯಿಸುವ ಎಲ್ಲ ಅಗತ್ಯಗಳನ್ನೂ ಸದಸ್ಯರು ಪೂರೈಸಬೇಕು.
2. ಗ್ರಾಹಕನು ಸರಕುಗಳಲ್ಲಿ ಹೂಡುವ/ಟ್ರೇಡ್ ಮಾಡುವ ಇಚ್ಛೆಯುಳ್ಳವನಾಗಿರುತ್ತಾನೆ. ಈ ಉದ್ದೇಶಕ್ಕಾಗಿ ಅವನು ಇಂಟರ್‌ನೆಟ್ ಆಧಾರಿತ ಟ್ರೇಡಿಂಗ್ ಸೌಲಭ್ಯ ಅಥವಾ ವೈರ್‌ಲೆಸ್ ತಂತ್ರಜ್ಞಾನ ಬಳಸಿ ಸರಕುಗಳ ಟ್ರೇಡಿಂಗ್ ಬಳಸಲು ಬಯಸುತ್ತಾನೆ. ಸದಸ್ಯರು ಗ್ರಾಹಕನಿಗೆ IBT ಸೇವೆಯನ್ನು ಒದಗಿಸಬೇಕು, ಮತ್ತು ಗ್ರಾಹಕನು ಸ್ಟಾಕ್ ಬ್ರೋಕರನ IBT ಸೇವೆಯನ್ನು ಪಡೆದುಕೊಳ್ಳಬೇಕು. ಆದರೆ ಇದು SEBI /ಎಕ್ಸ್ ಚೇಂಜುಗಳ ಉಪಬಂಧಗಳಿಗೆ ಮತ್ತು ಸ್ಟಾಕ್ ಬ್ರೋಕರನ IBT ವೆಬ್-ಸೈಟಿನಲ್ಲಿ ಒದಗಿಸಿರುವ ಕರಾರುಗಳು ಮತ್ತು ಷರತ್ತುಗಳಿಗೆ ಬದ್ಧವಾಗಿರುತ್ತದೆ . ಆದರೆ ಮೂಲತಃ ಇವು SEBI/ಎಕ್ಸ್‌ಚೇಂಜುಗಳು ನಿಗದಿಪಡಿಸಿರುವ ಮಾನದಂಡಗಳಿಗೆ ಅನುಸಾರವಾಗಿರಬೇಕು.
3. ಸದಸ್ಯರು ವೈರ್‌ಲೆಸ್ ತಂತ್ರಜ್ಞಾನ/ಇಂಟರ್‌ನೆಟ್/ಸ್ಮಾರ್ಟ್ ಆರ್ಡರ್ ರೌಂಟಿಂಗ್ ಅಥವಾ ಇನ್ನ್ಯಾವುದೇ ತಂತ್ರಜ್ಞಾನದ ಜೊತೆಗೆ ಬರುವ ಲಕ್ಷಣಗಳು,ಅಪಾಯಗಳು,ಹೊಣೆಗಳು,ಬಾಧ್ಯತೆಗಳು ಮತ್ತು ಜವಾಬ್ದಾರಿಗಳನ್ನು ಗ್ರಾಹಕನ ಗಮನಕ್ಕೆ ತರಬೇಕು.
4. ಆರಂಭದ ಪಾಸ್‌ವರ್ಡನ್ನು ಸದಸ್ಯರ IBT ಸಿಸ್ಟಂ ತಾನೇ ಉತ್ಪತಿ ಮಾಡುತ್ತದೆ ಮತ್ತು ಇದು ಪಾಸ್‌ವರ್ಡ್ ಪಾಲಿಸಿ SEBI/ಎಕ್ಸ್ ಚೇಂಜುಗಳ ಮಾನಕಗಳ ಪ್ರಕಾರ ಇದೆಯೆಂದು ಗ್ರಾಹಕನಿಗೆ ತಿಳಿಸಬೇಕು.
5. ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಅನ್ನು ಗೌಪ್ಯವಾಗಿಟ್ಟುಕೊಳ್ಳಬೇಕಾಗಿದ್ದು ಗ್ರಾಹಕನ ಹೊಣೆ. ಅವನು ಅನುಮತಿಸಿರಲಿ ಬಿಡಲಿ ಅವನ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಅನ್ನು ಬಳಸಿ ಸದಸ್ಯರ IBT ವ್ಯವಸ್ಥೆಯಲ್ಲಿ ನಡೆದ ಎಲ್ಲ ಆದೇಶಗಳು ಮತ್ತು ವ್ಯವಹಾರಗಳಿಗೆ ಗ್ರಾಹಕನೇ ಜವಾಬ್ದಾರ,. ವೈರ್‌ಲೆಸ್ ತಂತ್ರಜ್ಞಾನ ಬಳಸಿ ಆರ್ಡರ್ ರೂಟೆಡ್ ಸಿಸ್ಟಂ ಮೂಲಕ ಮಾಡುವ ಇಂಟರ್‌ನೆಟ್ ಟ್ರೇಡಿಂಗ್/ ಸರಕುಗಳು ಟ್ರೇಡಿಂಗ್‌ಗಳಿಗೆ ಅಧಿಕೃತಗೊಳಿಸುವ ತಂತ್ರಜ್ಞಾನಗಳು ಮತ್ತು ಕಟ್ಟುನಿಟ್ಟಾದ ಸರಕು ಕ್ರಮಗಳು ಅಗತ್ಯ ಎಂದು ಗ್ರಾಹಕನಿಗೆ ತಿಳಿದಿರಬೇಕು. ಗ್ರಾಹಕನು ತನ್ನ/ತನ್ನ ಅಧಿಕೃತ ಪ್ರತಿನಿಧಿಯ ಪಾಸ್ ವರ್ಡನ್ನು ಅನ್ಯ ವ್ಯಕ್ತಿಗಳಿಗೆ, ಸದಸ್ಯರ ಸಿಬ್ಬಂದಿ ಮತ್ತು ಡೀಲರೂಗಳೂ ಸೇರಿದಂತೆ ಬಹಿರಂಗಪಡಿಸುವುದಿಲ್ಲ ಎಂದು ಭರವಸೆ ನೀಡುತ್ತಾನೆ.
6. ಅಕಸ್ಮಾತ್ ಪಾಸ್‌ವರ್ಡ್ ಮರೆತರೆ, IBT ಸಿಸ್ಟಂನಲ್ಲಿ ಸರಕು ದೋಷಗಳು ಕಂಡುಬಂದರೆ, ತನ್ನ ಯೂಸರ್ ನೇಮ್/ಪಾಸ್‌ವರ್ಡ್/ಖಾತೆ ಬಳಸಿಕೊಂಡು ಅನಧಿಕೃತ ವ್ಯಕ್ತಿಗಳು ವ್ಯವಹರಿಸಿದ್ದಾರೆಂದು ಪತ್ತೆಯಾದರೆ/ಅನುಮಾನಪಟ್ಟರೆ ಗ್ರಾಹಕನು ತಕ್ಷಣವೇ ಸದಸ್ಯರಿಗೆ ಲಿಖಿತವಾಗಿ ತಿಳಿಸಬೇಕು.ಅದರಲ್ಲಿ ದಿನಾಂಕ,ವಿಧಾನ,ಅನಧಿಕೃತ ವ್ಯವಹಾರಗಳು ಇತ್ಯಾದಿ ವಿವರಗಳನ್ನು ನೀಡಬೇಕು.
7. ಸದಸ್ಯರು ವೈರ್‌ಲೆಸ್ ತಂತ್ರಜ್ಞಾನ/ಇಂಟರ್‌ನೆಟ್/ಸ್ಮಾರ್ಟ್ ಆರ್ಡರ್ ರೌಂಟಿಂಗ್ ಅಥವಾ ಇನ್ನ್ಯಾವುದೇ ತಂತ್ರಜ್ಞಾನದ ಜೊತೆಗೆ ಬರುವ ಲಕ್ಷಣಗಳು, ಅಪಾಯಗಳು, ಹೊಣೆಗಳು, ಬಾಧ್ಯತೆಗಳು ಮತ್ತು ಜವಾಬ್ದಾರಿಗಳು ಗ್ರಾಹಕನಿಗೆ ತಿಳಿದಿರಬೇಕು. ಅವನು ಅನುಮತಿಸಿರಲಿ ಬಿಡಲಿ ಸ್ಟಾಕ್ ಬ್ರೋಕರನ IBT ವ್ಯವಸ್ಥೆಯಲ್ಲಿ ನಡೆದ ಎಲ್ಲಆದೇಶಗಳು ಮತ್ತು ವ್ಯವಹಾರಗಳಿಗೆ ಗ್ರಾಹಕನೇ ಪೂರ್ಣ ಜವಾಬ್ದಾರ.
8. ಗ್ರಾಹಕನು ಕೋರಿದರೆ ಸದಸ್ಯರು ಆರ್ಡರ್/ಟ್ರೇಡ್ ಧೃಢೀಕರಣವನ್ನು ಇಮೇಲ್ ಮೂಲಕ ಮಾಡುತ್ತಾನೆ. ಇದು ವೆಬ್ ಪೋರ್ಟಲ್‌ನಲ್ಲೂ ಸಿಗುತ್ತದೆ. ಒಂದೊಮ್ಮೆ ಗ್ರಾಹಕನು ವೈರ್‌ಲೆಸ್ ತಂತ್ರಜ್ಞಾನವನ್ನು ಬಳಸುತ್ತಿದ್ದರೆ ಸದಸ್ಯರು ಆರ್ಡರ್/ಟ್ರೇಡ್ ಧೃಢೀಕರಣವನ್ನು ಗ್ರಾಹಕನ ಸಾಧನಕ್ಕೆ ಕಳುಹಿಸುತ್ತಾನೆ.
9. ಇಂಟರ್‌ನೆಟ್ ಮೂಲಕ ಟ್ರೇಡಿಂಗ್ ಎಂದರೆ ಅನೇಕ ಅನಿಶ್ಚಿತತೆಗಳು ಮತ್ತು ಸಂಕೀರ್ಣ ಹಾರ್ಡ್‌ವೇರ್, ಸಾಫ್ಟ್‌ವೇರ್, ಸಿಸ್ಟಂಗಳು, ಸಂವಹನೆಯ ಲೈನುಗಳು, ಇತ್ಯಾದಿ ಇತ್ಯಾದಿ ಇರುತ್ತವೆ. ಇವು ಅಡಚಣೆ ಮತ್ತು ಸ್ಥಳಾಂತರಗಳಿಂದ ಕೂಡಿರುತ್ತವೆ ಎಂಬುದ ಗ್ರಾಹಕನಿಗೆ ತಿಳಿದಿರಬೇಕು. ಯಾವುದೇ ಅಡಚಣೆ ಇಲ್ಲದೆ ಸದಾ ಕಾಲ ಗ್ರಾಹಕನಿಗೆ IBT ಸೇವೆಗಳನ್ನು ಒದಗಿಸಲಾಗುತ್ತದೆ ಎಂದು ಸದಸ್ಯರು/ಎಕ್ಸ್

ಚೇಂಜ್ ಯಾವುದೇ  ಭರವಸೆ ನೀಡುವುದಿಲ್ಲ.

10. ಸ್ಟಾಕ್ ಬ್ರೋಕರನ IBT ಸಿಸ್ಟಂ ಅಥವಾ ಸೇವೆ ಅಥವಾ ಎಕ್ಸ್‌ಚೇಂಜಿನ ಸೇವೆಗಳ ಅಮಾನತ್ತು, ಅಡಚಣೆ, ಅಲಭ್ಯತೆ ಅಥವಾ ತಪ್ಪು ನಿರ್ವಹಣೆಗೆ ಅಥವಾ ಎಕ್ಸ್‌ಚೇಂಜ್/ಸದಸ್ಯರ ನಿಯಂತ್ರಣದಲ್ಲಿಲ್ಲದ  ಕಾರಣದಿಂದ  ಗ್ರಾಹಕ/ಎಕ್ಸ್‌ಚೇಂಜ್/ ಸದಸ್ಯರು ಕಡೆ ಏನಾದರೂ ಸಂಪರ್ಕ/ಸಿಸ್ಟಂ ವೈಫಲ್ಯವಾದರೆ, ಗ್ರಾಹಕನಿಗೆ ಎಕ್ಸ್‌ಚೇಂಜ್/ ಸದಸ್ಯರು ವಿರುದ್ಧ ಯಾವುದೇ ಕ್ಲೇಮ್ ಇರುವುದಿಲ್ಲ.